# ಜನತಾ ವಾಣಿ


ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮೇ 13, 2022

ಸಂಪುಟ : 48 ಸಂಚಿಕೆ : 360 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಒ.ಬಿ.ಸಿ. ಮೀಸಲಾತಿಗೆ ಎಲ್ಲ ಪ್ರಯತ್ನ: ಬೊಮ್ಮಾಯಿ



ಬೆಂಗಳೂರು, ಮೇ 12 - ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಒದಗಿಸಲು ಕಾನೂನಾತ್ಮಕವಾಗಿ ಎಲ್ಲ ಪ್ರಯತ್ನಗಳನ್ನು ಮಾಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಪಟ್ಟಂತೆ ಕಾನೂನು ಸಚಿವರು, ಅಡ್ವೊಕೇಟ್ ಜನರಲ್ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸುಪ್ರೀಂ ಕೋರ್ಟ್‌ನ ಎರಡು ತೀರ್ಪುಗಳ ಸಂಪೂರ್ಣ ವಿಶ್ಲೇಷಣೆ ಮಾಡಲಾಗುತ್ತಿದೆ. ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ನೀಡಲು ಆಯೋಗವನ್ನು ರಚಿಸಲಾಗಿದೆ. ವಿರೋಧ ಪಕ್ಷದ ನಾಯಕರು ಈ ಬಗ್ಗೆ ಪತ್ರ ಬರೆದಿದ್ದಾರೆ. ಈ ಎಲ್ಲ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಗುವುದು. ಈ ವಿಚಾರದಲ್ಲಿ ತೆಗೆದುಕೊಳ್ಳಬೇಕಾದ ನಿಲುವು ಹಾಗೂ ಸಾಧಕ-ಬಾಧಕಗಳ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು. ಇದುವರೆಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸಂವಿಧಾನಾತ್ಮಕವಾಗಿ ಹಿಂದುಳಿದ ವರ್ಗಗಳಿಗೆ ಕಾನೂನು ರೀತ್ಯ ಪ್ರಾತಿನಿಧ್ಯ ನೀಡಲಾಗುತ್ತಿದೆ ಎಂದರು.

ಹಿಂದುಳಿದ ವರ್ಗಗಳ ರಾಜಕೀಯ ಪ್ರಾತಿನಿಧ್ಯ ನೀಡಿಯೇ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮಾಡಬೇಕೆಂಬುದು ಸರ್ಕಾರ ಹಾಗೂ ಎಲ್ಲ ಪಕ್ಷಗಳ ಅಭಿಪ್ರಾಯವಾಗಿದ್ದು, ಈ ನಿಟ್ಟಿನಲ್ಲಿ ಚುನಾವಣೆ ಪ್ರಕ್ರಿಯೆಗಳ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು (2ನೇ ಪುಟಕ್ಕೆ)

## ಸುಗ್ರೀವಾಜ್ಞೆ ಮೂಲಕ ಮತಾಂತರ ತಡೆ ಮಸೂದೆ ಜಾರಿಗೆ ನಿರ್ಧಾರ

ಬೆಂಗಳೂರು, ಮೇ 12 – ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ರಾಜ್ಯ ಸಂಪುಟದಲ್ಲಿ ನಿರ್ಧರಿಸಲಾಗಿದೆ. ಈ ಮಸೂದೆ ಮತಾಂತರ ತಡೆ ಕಾಯ್ದೆ ಎಂದೇ ಹೆಸರಾಗಿದೆ.

ಈ ಮಸೂದೆಗೆ ವಿಧಾನಸಭೆ ಕಳೆದ ವರ್ಷ ಡಿಸೆಂಬರ್‌ನಲ್ಲಿ ಒಪ್ಪಿಗೆ ನೀಡಿತ್ತು. ಆದರೆ, ವಿಧಾನ ಪರಿಷತ್‌ನಲ್ಲಿ ಬಿಜೆಪಿ ಬಹುಮತ ಹೊಂದಿರದ ಕಾರಣ ಅಲ್ಲಿ ಅಂಗೀಕಾರ ಪಡೆಯಲು ಸಾಧ್ಯವಾಗಿರಲಿಲ್ಲ.

ಸಂಪುಟ ಸಭೆಯ ನಂತರ ಮಾತನಾಡಿರುವ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ನಾವು ವಿಧಾನ ಸಭೆಯಲ್ಲಿ ಮಸೂದೆಗೆ ಅಂಗೀಕಾರ ಪಡೆದಿದ್ದೇವೆ. ಕೆಲ ಕಾರಣಗಳಿಂದ ಪರಿಷತ್‌ನಲ್ಲಿ ಅಂಗೀಕಾರ ಪಡೆಯಲು ಸಾಧ್ಯವಾಗಿಲ್ಲ. ಹೀಗಾಗಿ ಸುಗ್ರೀವಾಜ್ಞೆ ಮೂಲಕ ಮಸೂದೆ ಜಾರಿಗೆ ತರಲು ನಿರ್ಧರಿಸಿದ್ದೇವೆ ಎಂದು ಹೇಳಿದ್ದಾರೆ.

ವಿಧಾನಸಭೆಯಲ್ಲಿ ಅಂಗೀಕಾರಗೊಂಡಿರುವ ಮಸೂದೆಯನ್ನೇ ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲಾಗುವುದು. ಮುಂದಿನ (3ನೇ ಪುಟಕ್ಕೆ)

> **ವಿಧಾನ ಸಭೆಯಲ್ಲಿ ಮಸೂದೆಗೆ ಅಂಗೀಕಾರ ಪಡೆದಿದ್ದೇವೆ. ಕೆಲ ಕಾರಣಗಳಿಂದ ಪರಿಷತ್‌ನಲ್ಲಿ ಅಂಗೀಕಾರ ಪಡೆಯಲು ಸಾಧ್ಯವಾಗಿಲ್ಲ. ಹೀಗಾಗಿ ಸುಗ್ರೀವಾಜ್ಞೆ ಮೂಲಕ ಮಸೂದೆ ಜಾರಿಗೆ ತರಲು ನಿರ್ಧರಿಸಿದ್ದೇವೆ.**
>
> **- ಜೆ.ಸಿ. ಮಾಧುಸ್ವಾಮಿ, ಕಾನೂನು ಸಚಿವ**

## ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ಸೂರ್ಯ ಚಂದ್ರ ಇರುವಷ್ಟೇ ಸತ್ಯ



**ಹರಿಹರದಲ್ಲಿ ಬಿ.ಪಿ. ಹರೀಶ್ ಜನ್ಮ ದಿನ ಸಮಾರಂಭದಲ್ಲಿ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ**

ಹರಿಹರ, ಮೇ 12 - ರಾಜ್ಯದಲ್ಲಿ ವಿರೋಧ ಪಕ್ಷದ ನಾಯಕರು ಎಷ್ಟೇ ಬೊಬ್ಬೆ ಹಾಕಿದರು ಮುಂದೆ ಬರುವ ವಿಧಾನಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರುವುದು ಸೂರ್ಯ - ಚಂದ್ರ ಇರುವಷ್ಟೇ ಸತ್ಯ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಸಿದ್ದೇಶ್ವರ ಪ್ಯಾಲೇಸ್ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ಮಾಜಿ ಶಾಸಕ ಬಿ.ಪಿ.ಹರೀಶ್ ಹುಟ್ಟು ಹಬ್ಬದ ಸಮಾರಂಭವನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು, ಸಾಮಾಜಿಕ ನ್ಯಾಯದ ಆಡಳಿತವನ್ನು ನೀಡಿದ್ದಾರೆ. ನಾನು ಅಧಿಕಾರದಲ್ಲಿ ಇರಲಿ, ಇಲ್ಲದೇ ಇರಲಿ, ರಾಜ್ಯದಲ್ಲಿ ಮುಂದೆ ಬರುವ ಚುನಾವಣೆಯಲ್ಲಿ ಮತ್ತೊಮ್ಮೆ 160-170 ಸ್ಥಾನಗಳನ್ನು ಗೆಲ್ಲಿಸುವುದಾಗಿ ಯಡಿಯೂರಪ್ಪ ರಾಜೀನಾಮೆ ನೀಡುವ ಸಮಯದಲ್ಲಿ ಸವಾಲು ಹಾಕಿದ್ದಾರೆ. ಇದರಿಂದ ವಿರೋಧ ಪಕ್ಷದವರು ನಡುಗಿ ಹೋಗಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್, ಜೆಡಿಎಸ್ ಸರ್ವನಾಶ ಆಗುತ್ತದೆ ಎಂದು ಹೇಳಿದರು.

ಮುಂದಿನ ಚುನಾವಣೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ, ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಯಡಿಯೂರಪ್ಪನವರು ಹಾಕಿಕೊಟ್ಟ (2ನೇ ಪುಟಕ್ಕೆ)

## ಅವಧಿಗೆ ಮೊದಲೇ ಮುಂಗಾರಿನ ಸೂಚನೆ



**ಅಂಡಮಾನ್‌ನಲ್ಲಿ ಮೇ 15ರಂದು ಮೊದಲ ಮಳೆ**

ನವದೆಹಲಿ, ಮೇ 12 – ಅವಧಿಗೆ ಮೊದಲೇ ಮುಂಗಾರು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಬರಲಿದೆ. ಮೇ 15ರಂದು ದ್ವೀಪಗಳಲ್ಲಿ ಮೊದಲ ಮುಂಗಾರು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮುಂಗಾರು ಮಾರುತಗಳು ದಕ್ಷಿಣ ಅಂಡಮಾನ್ ಸಮುದ್ರ ಹಾಗೂ ಬಂಗಾಳ ಕೊಲ್ಲಿಯ ಆಗ್ನೇಯ ಭಾಗಕ್ಕೆ ಮೇ 15ರಂದು ತಲುಪಲಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂಗಾರು ಮಾರುತಗಳು ಉತ್ತರಕ್ಕೆ ತೆರಳಿ ಕೇರಳ ತಲುಪಲು ವಾತಾವರಣ ಅನುಕೂಲಕರವಾಗಿದೆ ಎಂದು ಹವಾಮಾನ ವಿಜ್ಞಾನಿಗಳು ಹೇಳಿದ್ದಾರೆ.

ಸಾಮಾನ್ಯವಾಗಿ ಜೂನ್ 1ರಂದು ಕೇರಳಕ್ಕೆ ಮುಂಗಾರು ತಲುಪುತ್ತದೆ. ದೇಶದ ಬಹುತೇಕ ಭಾಗ (3ನೇ ಪುಟಕ್ಕೆ)

## ಮದರಸಾಗಳಲ್ಲಿ ರಾಷ್ಟ್ರಗೀತೆ ಕಡ್ಡಾಯಕ್ಕೆ ಉ.ಪ್ರದೇಶ ಆದೇಶ

ಲಖ್ನೌ, ಮೇ 12 – ಎಲ್ಲಾ ಮದರಸಾಗಳಲ್ಲಿ ಕಡ್ಡಾಯವಾಗಿ ರಾಷ್ಟ್ರಗೀತೆ ಹಾಡಬೇಕೆಂದು ಉತ್ತರ ಪ್ರದೇಶ ಸರ್ಕಾರ ಆದೇಶ ಹೊರಡಿಸಿದೆ.

ಉತ್ತರ ಪ್ರದೇಶದ ಮದರಸಾ ಶಿಕ್ಷಣ ಮಂಡಳಿಯ ರಿಜಿಸ್ಟ್ರಾರ್ ಎಸ್.ಎನ್. ಪಾಂಡೆ ಅವರು ಈ ಕುರಿತು ಆದೇಶವೊಂದನ್ನು ಹೊರಡಿಸಿದ್ದಾರೆ.

ಮೇ 12ರಿಂದ ಮದರಸಾ ತರಗತಿಗಳು ಪುನರಾರಂಭ ವಾಗಿದ್ದು, ಅಂದಿನಿಂದಲೇ ಆದೇಶ ಜಾರಿಗೆ ಬಂದಿದೆ ಎಂದು ತಿಳಿಸಲಾಗಿದೆ. ತರಗತಿಗಳ ಆರಂಭಕ್ಕೆ ಮುಂಚೆ ರಾಷ್ಟ್ರಗೀತೆ ಹಾಡಬೇಕೆಂದು ತಿಳಿಸಲಾಗಿದೆ. ಕೆಲ ಮದರಸಾಗಳಲ್ಲಿ ರಾಷ್ಟ್ರಗೀತೆ ಹಾಡಲಾಗುತ್ತಿತ್ತು. ಆದರೆ, ಇದು ಕಡ್ಡಾಯವಾಗಿರಲಿಲ್ಲ.

## ರವೀಂದ್ರನಾಥ್ ಬೊಂಗಾಳೆ ನಿಧನ



ಹರಿಹರದ ರೈಲ್ವೆ ಸ್ಟೇಷನ್ ರಸ್ತೆ ವಾಸಿ,
**ಬೊಂಗಾಳೆ ಆಟೋಮೊಬೈಲ್ಸ್ ಮಾಲೀಕರು ಮತ್ತು ಗ್ರಾಸಿಂ ಇಂಡಸ್ಟ್ರೀಸ್‌ನ ನಿವೃತ್ತ ಇಂಜಿನಿಯರ್ ಹಾಗೂ ಹ॥ ಭ॥ ಪ॥ ದಿ॥ ಶಿವಪ್ಪ ಬೊಂಗಾಳೆ**
ಇವರ ಪುತ್ರ

**ಶ್ರೀ ರವೀಂದ್ರನಾಥ್ ಬೊಂಗಾಳೆ**

ಅವರು ದಿನಾಂಕ: 11.05.2022ರ ಬುಧವಾರ ಮಧ್ಯಾಹ್ನ 3.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 73 ವರ್ಷ ವಯಸ್ಸಾಗಿತ್ತು. ಪತ್ನಿ ಮತ್ತು ಮಕ್ಕಳು ಹಾಗೂ ಅಪಾರ ಬಂಧು- ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.05.2022ರ ಶುಕ್ರವಾರ ಸಂಜೆ 4 ಗಂಟೆಗೆ ಹರಿಹರದ ದಾಲ್ಮಿಯಾ ಫಾಟ್‌ನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ಮೊ: 88671 16379**




# ನಿಗದಿತ ಸಮಯದಲ್ಲಿ ಕಡತಗಳು ವಿಲೇವಾರಿಯಾಗದಿದ್ದರೆ ಕ್ರಮ

## ಹೊನ್ನಾಳಿ ತಾಲ್ಲೂಕು ಕಚೇರಿಗೆ ಭೇಟಿ ನೀಡಿ ಅಧಿಕಾರಿಗಳನ್ನು ಎಚ್ಚರಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ

ಹೊನ್ನಾಳಿ, ಮೇ 12- ತಾಲ್ಲೂಕು ಕಚೇರಿಯಲ್ಲಿ ಅನೇಕ ದಿನಗಳಿಂದ ಸಾಕಷ್ಟು ಕಡತಗಳು ಪರಿಹಾರ ಕಂಡಿಲ್ಲ, ಅರ್ಜಿಗಳು ಕಪಾಟು, ಬೀರುವಿನಲ್ಲಿ ಮಲಗಿಕೊಂಡಿವೆ, ಕಂದಾಯ ಇಲಾಖೆಯ ಸಂಬಂಧಪಟ್ಟ ಕೇಸ್ ವರ್ಕರ್ ಹಾಗೂ ಸಿಬ್ಬಂದಿಗಳಿಗೆ ಈ ಬಾರಿ ಎಚ್ಚರಿಕೆ ಕೊಡುತ್ತೇನೆ, ಮುಂದೆ ಮತ್ತೊಮ್ಮೆ ಭೇಟಿ ನೀಡಿದಾಗ ಇದೇ ರೀತಿ ಅವ್ಯವಸ್ಥೆ ಕಂಡುಬಂದರೆ ಸಂಬಂಧ ಪಟ್ಟ ಸಿಬ್ಬಂದಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಗುರುವಾರ ಮುಖ್ಯಮಂತ್ರಿಗಳ ಸೂಚನೆಯಂತೆ ಜಿಲ್ಲಾಧಿಕಾರಿಗಳು ಪ್ರತಿ ತಾಲ್ಲೂಕು ಕಚೇರಿಗೆ ಭೇಟಿ ನೀಡಿ ತಪಾಸಣೆ ಮಾಡಬೇಕು ಎಂಬ ಆದೇಶದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಹೊನ್ನಾಳಿಯ ಕಂದಾಯ ಇಲಾಖೆಯ ವಿವಿಧ ಸೆಕ್ಷನ್‌ಗಳಿಗೆ ಇಂದು ಭೇಟಿ ನೀಡಿ ತಪಾಸಣೆ ನಡೆಸಿ ಅವರು ಮಾತನಾಡಿದರು.

ಆರ್‌ಆರ್‌ಟಿ ವಿಭಾಗದಲ್ಲಿ ಕಳೆದ ಕೆಲದಿನಗಳಿಂದ ಕಡತಗಳನ್ನು ವಿಲೇವಾರಿ ಮಾಡದೇ ಹಾಗೆಯೇ ಇಟ್ಟುಕೊಂಡಿದ್ದಾರೆ, ದಾಖಲೆಗಳನ್ನು ಜೆರಾಕ್ಸ್ ಮಾಡಿಸುವುದಕ್ಕೆ ಹೊರಗಡೆಗೆ ಕಳಿಸುತ್ತಿದ್ದಾರೆ. ಇದರಿಂದ ಸಮಸ್ಯೆಗಳು ಉದ್ಭವಿಸುತ್ತವೆ, ಜೊತೆಗೆ ತಮ್ಮ ಕೆಲಸಕ್ಕೆ ಬರುವವರಿಂದ ಎಕ್ಸ್‌ಟ್ರಾ ಫೀ ವಸೂಲಿ ಮಾಡುತ್ತಿರುವ ಆರೋಪಗಳಿವೆ. ಈ ಕಾರಣಕ್ಕೆ ಅವರಿಗೆ ಶೋಕಾಸ್ ನೋಟೀಸ್ ನೀಡುತ್ತೇನೆ ಎಂದರು.

ಈ ರೀತಿಯ ದಿಟ್ಟ ಕ್ರಮಗಳಿಂದಾಗಿ ಇಲಾಖಾ ಅಧಿಕಾರಿಗಳು ಚುರುಕಾಗುತ್ತಾರೆ. ಈ ಕಾರಣಕ್ಕಾಗಿಯೇ ಸರ್ಕಾರ ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಎಂದು ಮಾಡಿದೆ. ಇದರಿಂದಾಗಿ ಸಾರ್ವಜನಿಕರು ತಮ್ಮ ಕೆಲಸ ಕಾರ್ಯಕ್ಕೆ ಜಿಲ್ಲಾಧಿಕಾರಿಗಳ ಕಚೇರಿಗೆ ಬರುವುದು ಕಡಿಮೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ ಎಂದು ಅವರು ಹೇಳಿದರು.

**ಗೊಲ್ಲರಹಳ್ಳಿಗೆ ಭೇಟಿ;** ಗ್ರಾಮ ಒನ್ ಕೇಂದ್ರ ಸ್ಥಾಪನೆಯ ಉದ್ದೇಶ ಗ್ರಾಮಗಳ



ಲ್ಲಿಯೇ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಬೇಕು. ಆದರೆ, ಗ್ರಾಮಸ್ಥರು ಕೆಲವರು ತಾಲ್ಲೂಕು ಕಚೇರಿಗೆ ಬಂದಿದ್ದು, ಅವರನ್ನು ವಿಚಾರಿಸಿದಾಗ ಅವರು ಸರ್ವರ್ ಸ್ಲೋ ಇದೆ ಎಂದು ಹೇಳಿದ್ದು ಸರಿಯಲ್ಲ, ಕೆಲವೊಮ್ಮೆ ಭೂಮಿ ಸರ್ವರ್ ಸ್ಲೋ ಆಗುತ್ತದೆ. ಆದರೆ ಅದು ಕೇವಲ ಒಂದು ಗ್ರಾಮದಲ್ಲಿ ಅಥವಾ ಒಂದು ಕೇಂದ್ರದಲ್ಲಿ ಆಗುವುದಿಲ್ಲ. ಇಡೀ ರಾಜ್ಯದಲ್ಲಿಯೇ ಸ್ಲೋ ಆಗಿರುತ್ತದೆ. ಇದನ್ನು ಅರ್ಥ ಮಾಡಿಕೊಂಡು ತಾಳ್ಮೆಯಿಂದ ಸಾರ್ವಜನಿಕರು ತಮ್ಮ ಕೆಲಸಗಳನ್ನು ಆದಷ್ಟು ಗ್ರಾಮ-1 ರಲ್ಲಿಯೇ ಮಾಡಿಸಿಕೊಳ್ಳಬೇಕು ಎಂದು ಗೊಲ್ಲರಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಮಾತನಾಡಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಹುಲ್ಮನಿ ತಿಮ್ಮಣ್ಣ, ತಹಶೀಲ್ದಾರ್ ಎಚ್.ಜೆ. ರಶ್ಮಿ, ಗ್ರೇಡ್-2 ತಹಶೀಲ್ದಾರ್ ಸುರೇಶ್ ನಾಯ್ಕ, ಪಿಎಸ್ಐ ಬಸವನಗೌಡ ಬಿರಾದಾರ್, ಉಪ ತಹಶೀಲ್ದಾರ್ ಮಂಜುನಾಥ್ ಇಂಗಳಗೊಂದಿ, ಪರಮೇಶ್‌ನಾಯ್ಕ, ಗ್ರಾಮ ಲೆಕ್ಕಾಧಿಕಾರಿಗಳಾದ ಬಸವರಾಜ್, ಧರ್ಮಪ್ಪ ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ಯೋಗೀಶ್, ವೆಂಕಟೇಶ್‌ನಾಯ್ಕ ಹಾಜರಿದ್ದರು.

### ಕಡತಗಳನ್ನು ತಪಾಸಣೆ ಮಾಡಿದ ಜಿಲ್ಲಾಧಿಕಾರಿ

ತಾಲ್ಲೂಕು ಕಚೇರಿಯಲ್ಲಿನ ಸರ್ವೇ ವಿಭಾಗ, ಆಹಾರ ವಿಭಾಗ, ಆರ್‌ಆರ್‌ಟಿ ಸೆಕ್ಷನ್, ಭೂಮಿ ಕೇಂದ್ರ, ಎಲ್‌ಎನ್‌ಡಿ ಶಾಖೆ, ಯುಎನ್‌ಡಿ ಶಾಖೆ, ಮುಜರಾಯಿ, ಸಾಮಾಜಿಕ ಭದ್ರತೆ ವಿಭಾಗಗಳಿಗೆ ಭೇಟಿ ನೀಡಿ ಟೇಬಲ್ ಹಾಗೂ ಕಡತಗಳ ತಪಾಸಣೆ ಮಾಡಿದರು. ನಂತರ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಸಾರ್ವಜನಿಕರಿಂದ 35 ಅರ್ಜಿಗಳು ಸಲ್ಲಿಕೆಯಾದವು.

# ಮಲೇಬೆನ್ನೂರು : ಮಳೆ, ಗಾಳಿಗೆ ಬೆಳೆ ನಾಶ, ಅಧಿಕಾರಿಗಳ ಪರಿಶೀಲನೆ



ಮಲೇಬೆನ್ನೂರು, ಮೇ 12 - ಬುಧವಾರ ಸಂಜೆ ಬೀಸಿದ ಬಿರುಗಾಳಿ ಸಹಿತ ಮಳೆಗೆ ಕಾಳು ಕಟ್ಟುವ ಹಂತದ ಭತ್ತದ ಬೆಳೆ ನೆಲಕಚ್ಚಿದ್ದು, ಗುರುವಾರ ತಹಶೀಲ್ದಾರ್ ಡಾ. ಅಶ್ವತ್ಥ ಮಲ್ಲೇನಹಳ್ಳಿ ಬಸವಲಿಂಗಪ್ಪ ನೇತೃತ್ವದ ತಂಡ ಗುರುವಾರ ಆದಾಪುರ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪರಿಶೀಲನೆ ನಡೆಸಿದರು.

ಈ ವೇಳೆ ಆದಾಪುರದ ರೈತ ಸಣ್ಣ ಭೀಮಪ್ಪ, ಹನುಮಂತಪ್ಪ ಪರಿಹಾರ ಕೊಡಿಸಲು ಮನವಿ ಮಾಡಿದರು. ಮಳೆಯೊಂದಿಗೆ ಗಾಳಿ ಬೀಸಿದ ಕಾರಣ ಭತ್ತ ಬೆಳೆಯುವ ಪ್ರದೇಶದ ಬಹುತೇಕ ಕಡೆ ಭತ್ತ ನೆಲ ಕಚ್ಚಿದೆ.

ರೈತರು ಕಡಿಮೆ ಅವಧಿ ತಳಿ ಬಳಸುವುದು ಉತ್ತಮ. ರೈತರು ಬೆಳೆ ನಷ್ಟದಿಂದ ಪಾರಾಗಲು ಹವಾಮಾನಕ್ಕೆ ಅನುಗುಣವಾಗಿ ಬೆಳೆ ಪರಿವರ್ತಿಸಿಕೊಳ್ಳಿ ಎಂದು ಸಲಹೆ ನೀಡಿದ ತಹಶೀಲ್ದಾರ್ ಅವರು ಸರ್ಕಾರಕ್ಕೆ ಬೆಳೆ ನಷ್ಟದ ವರದಿ ತಯಾರಿಸಿ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.

ಸಹಾಯಕ ಕೃಷಿ ನಿರ್ದೇಶಕ ಡಾ. ನಾರನಗೌಡ, ಕೃಷಿ ಅಧಿಕಾರಿ ಇನಾಯತ್, ಕಂದಾಯ ಇಲಾಖೆಯ ಹೇಮಂತ್, ಕೃಷಿ ಇಲಾಖೆ ರಾಕೇಶ್ ಉಪಸ್ಥಿತರಿದ್ದರು.

# ಹಣ ವಸೂಲಿಗೆ ನಕಲಿ ದಾಳಿ: ನಾಲ್ಕು ಸಿಬಿಐ ಸಬ್ ಇನ್ಸ್‌ಪೆಕ್ಟರ್‌ಗಳು ವಜಾ

ನವದೆಹಲಿ, ಮೇ 12 - ಹಣ ವಸೂಲಿ ಉದ್ದೇಶದಿಂದ ಚಂಡೀಘಡದ ಕಂಪನಿಯೊಂದರ ಮೇಲೆ ನಕಲಿ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ತನ್ನ ನಾಲ್ವರು ಸಬ್‌ಇನ್‌ಸ್ಪೆಕ್ಟರ್‌ಗಳನ್ನು ಸಿ.ಬಿ.ಐ. ವಜಾಗೊಳಿಸಿದೆ. ಭ್ರಷ್ಟಾಚಾರ ಪ್ರಕರಣದಲ್ಲಿ ಇವರನ್ನು ಬಂಧಿಸಿದ ನಂತರ ವಜಾ ಕ್ರಮ ತೆಗೆದುಕೊಳ್ಳಲಾಗಿದೆ.

ಸಿ.ಬಿ.ಐ.ಗೆ ಮುಜುಗರ ತರುವ ಈ ಪ್ರಕರಣ ಬೆಳಕಿಗೆ ಬಂದ ನಂತರ ತನಿಖಾ ಸಂಸ್ಥೆಯ ನಿರ್ದೇಶಕ ಸುಬೋಧ್ ಕುಮಾರ್ ಜೈಸ್ವಾಲ್ ಅವರು ಕಠಿಣ ಕ್ರಮ ತೆಗೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸುಮಿತ್ ಗುಪ್ತ, ಪ್ರದೀಪ್ ರಾಣಾ, ಅಂಕುರ್ ಕುಮಾರ್ ಹಾಗೂ ಆಕಾಶ್ ಅಹ್ಲಾವತ್ ಅವರು ಸಿ.ಬಿ.ಐ.ನ ದೆಹಲಿ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ನಕಲಿ ದಾಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಂಡ ನಂತರ ಇವರನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿತ್ತು.

ಮೇ 10ರಂದು ಸಿ.ಬಿ.ಐ. ಅಧಿಕಾರಿಗಳೂ ಸೇರಿದಂತೆ ಆರು ಜನರು ತಮ್ಮ ಕಚೇರಿಗೆ ನುಗ್ಗಿದ್ದರು. ನಾನು ಉಗ್ರರಿಗೆ ಹಣ ನೀಡಿದ್ದೇನೆ ಎಂದು ಹೇಳಿದ್ದ ಅವರು, ಬಂಧಿಸುವ ಬೆದರಿಕೆ ಹಾಕಿದ್ದರು ಎಂದು ಚಂಡೀಘಡದ ಉದ್ಯಮಿಯೊಬ್ಬರು ಸಿ.ಬಿ.ಐ.ಗೆ ದೂರು ನೀಡಿದ್ದರು.

ಆರೋಪಿಗಳು ಬಲವಂತವಾಗಿ ನನ್ನನ್ನು ಕಾರೊಂದರ ಒಳಗೆ ಎಳೆದುಕೊಂಡು ಹೋಗಿ 25 ಲಕ್ಷ ರೂ.ಗಳ ಬೇಡಿಕೆ ಇಟ್ಟಿದ್ದರು ಎಂದು ದೂರಿನಲ್ಲಿ ಉದ್ಯಮಿ ಹೇಳಿದ್ದರು ಎಂದು ಸಿ.ಬಿ.ಐ. ವಕ್ತಾರ ಆರ್.ಸಿ. ಜೋಷಿ ಹೇಳಿದ್ದಾರೆ.

ಈ ನಕಲಿ ದಾಳಿಯಲ್ಲಿ ಗದ್ದಲ ಉಂಟಾಗಿತ್ತು. ಆಗ ದಾಳಿ ನಡೆಸಿದ ಅಧಿಕಾರಿಗಳ ಪೈಕಿ ಓರ್ವನನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು ನಂತರ ಉಳಿದವರ ಗುರುತು ಪತ್ತೆಯಾಗಿತ್ತು.

ನಂತರ ಆರೋಪಿಗಳ ನಿವಾಸಗಳ ಮೇಲೆ ದಾಳಿ ನಡೆಸಿ ಶೋಧ ನಡೆಸಿದ ಸಿ.ಬಿ.ಐ.ಗೆ ಹಲವಾರು ಆಕ್ಷೇಪಾರ್ಹ ದಾಖಲೆಗಳು ಸಿಕ್ಕಿದ್ದವು.

# ಮಲಬಾರ್ ಗೋಲ್ಡ್‌ನಲ್ಲಿ ದಾದಿಯರ ದಿನಾಚರಣೆ




ದಾವಣಗೆರೆ, ಮೇ 12- ಮಲಬಾರ್ ಗೋಲ್ಡ್ ಮತ್ತು ಡೈಮೆಂಡ್ಸ್‌ನಲ್ಲಿ ದಾದಿಯರ (ನರ್ಸ್ ಡೇ) ದಿನಾಚರಣೆ ಪ್ರಯುಕ್ತ ದಾದಿಯರಾದ ಗಾಯತ್ರಿದೇವಿ ಬಿಹೆಚ್‌ಇಒ ಅನುರಾಧ, ರೇಖಾ, ಸುಧಾ, ಮಂಜುಳ, ಸುಧಾ ಬಿ., ಕಮಲಾಬಾಯಿ, ಉಮಾಬಾಯಿ, ಶ್ವೇತಾ ಅವರುಗಳನ್ನು ಸನ್ಮಾನಿಸಿ, ಕೇಕ್ ಕತ್ತರಿಸುವುದರ ಮೂಲಕ ದಾದಿಯರ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಲಬಾರ್ ಗೋಲ್ಡ್ ಮತ್ತು ಡೈಮಂಡ್‌ನ ಮುಖ್ಯಸ್ಥ ಬೇಸಿಲ್ ರಾಜನ್, ಗ್ರಾಹಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮಾರಿಹಬ್ಬಗಳಿಗೆ ಖರ್ಚು ಮಾಡುವ ಹಣವನ್ನು ಉಳಿತಾಯ ಮಾಡಿ ಶಾಲೆ, ಗ್ರಂಥಾಲಯಗಳಿಗೆ ನೀಡಿ

### ಹರಪನಹಳ್ಳಿ ತಾಲ್ಲೂಕಿನ ಕಾರ್ಯಕ್ರಮದಲ್ಲಿ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಶ್ರೀ ಕರೆ

ಹರಪನಹಳ್ಳಿ, ಮೇ 12- ಮಾರಿಹಬ್ಬಗಳಿಗೆ ಖರ್ಚು ಮಾಡುವ ಹಣವನ್ನು ಉಳಿತಾಯ ಮಾಡಿ ಅದನ್ನು ಗ್ರಾಮದಲ್ಲಿರುವ ಶಾಲೆ, ಗ್ರಂಥಾಲಯಗಳಿಗೆ ನೀಡಿದಲ್ಲಿ ನಿಮ್ಮ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ ಎಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಮಾದಾಪುರ ಗ್ರಾಮದಲ್ಲಿ ಗುರುವಾರ ಶ್ರೀ ಬೀರಲಿಂಗೇಶ್ವರ ನೂತನ ದೇವಸ್ಥಾನದ ಉದ್ಘಾಟನೆ, ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಅನಾವರಣ ಕಾರ್ಯಕ್ರಮವನ್ನು ಡೊಳ್ಳು ಭಾರಿಸುವ ಮೂಲಕ ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ದಾರ್ಶನಿಕರ, ಮಹನೀಯರ ಪುತ್ಥಳಿ, ಮೂರ್ತಿ, ವಿಗ್ರಹಗಳನ್ನು ಪ್ರತಿಷ್ಠಾಪಿಸುವ ಗ್ರಾಮಗಳಿಗೆ ಭೇಟಿ ನೀಡುವುದಿಲ್ಲ, ಅನಾವರಣಗೊಳಿಸುವುದಿಲ್ಲ. ದಾರ್ಶನಿಕರ ತತ್ವ-ಸಿದ್ಧಾಂತಗಳು ನಮ್ಮ ಮನಸ್ಸಿನಲ್ಲಿ ಅಳವಡಿಸಿಕೊಂಡಲ್ಲಿ ಮಾತ್ರ ಇಂತಹ ಮೂರ್ತಿ, ಪುತ್ಥಳಿಗಳಿಗೆ ಅರ್ಥವಿರುತ್ತದೆ ಎಂದ ಅವರು, ಕಳೆದ ಆರೇಳು ತಿಂಗಳಿನಿಂದ



ಸಾರ್ವಜನಿಕ ಸ್ಥಳದಲ್ಲಿ ನಿರ್ಮಿಸುವ ದಾರ್ಶನಿಕ ಮಹನೀಯರ ಪುತ್ಥಳಿಯ ಅನಾವರಣ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ನಿಷೇಧಿಸಿದ್ದೇ ಕಾರಣ. ಗ್ರಾಮಗಳಲ್ಲಿ ಇಂತಹ ಪುತ್ಥಳಿ, ಮೂರ್ತಿ ಪ್ರತಿಷ್ಠಾಪನೆಯಿಂದ ಅಲ್ಲಲ್ಲಿ ಕೋಮು, ಸೌಹಾರ್ದತೆಗೆ ಧಕ್ಕೆ ಉಂಟಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ರಾಯಣ್ಣ ಮೂರ್ತಿ ಭಗ್ನ ವಿಚಾರ ವಿಧಾನಸೌಧದಲ್ಲಿ ಕಾಲಹರಣ ಮಾಡಿ, 1 ಕೋಟಿ 80 ಲಕ್ಷ ಖರ್ಚು ಮಾಡಲಾಗಿದ್ದು ಯಾವ ಪುರುಷಾರ್ಥಕ್ಕೆ ಎಂದು ಪ್ರಶ್ನಿಸಿದ ಅವರು, ನೀವು ನಿರ್ಮಿಸುವ ವಿಗ್ರಹಗಳಿಗೆ ರಕ್ಷಣೆ ಎಲ್ಲಿದೆ ಎಂದು ಖಾರವಾಗಿ ಕೇಳಿದ ಶ್ರೀಗಳು, ಇನ್ನು ಮುಂದೆ ಪುತ್ಥಳಿ, ಮೂರ್ತಿ ನಿರ್ಮಿಸಲು ಸ್ಥಳೀಯ ಎಲ್ಲಾ ಅಧಿಕಾರಿಗಳ ಪರವಾನಿಗೆ ಪಡೆದು ಮಾಡಿದಲ್ಲಿ ನಾನು ಬರುವುದಾಗಿ ಹೇಳಿದರು.

ದೇವರ ಹೆಸರಿನಲ್ಲಿ ಮಾರಿಹಬ್ಬಗಳನ್ನು ಮಾಡಲು ಕುರಿ, ಕೋಣ ಬಲಿಕೊಟ್ಟು ಮಾಂಸಹಾರ ಸೇವನೆ ಮಾಡುವುದು ಸರಿಯಲ್ಲ. ಹಾಗಂತ ನಾನು ಮಾಂಸ ವಿರೋಧಿಯಲ್ಲ, ನೀವು ನೈವೇದ್ಯ ಮಾಡಿದ ಮಾಂಸ ಆಹಾರವನ್ನು ಯಾವ ದೇವರು ಸೇವನೆ ಮಾಡುತ್ತವೆಯೋ ಅಂತಹ ದೇವರು, ದೇವರೇ ಅಲ್ಲ. ಹಾಗಾಗಿ ಎಲ್ಲರೂ ಮೂಢನಂಬಿಕೆಯ ಆಚಾರಗಳಿಂದ ಹೊರಬಂದು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ, ಪ್ರಜ್ಞಾವಂತರನ್ನಾಗಿ ಮಾಡುವ ಹೊಣೆ ನಿಮ್ಮ ಮೇಲಿದೆ ಎಂದರು.

ಎಎಸ್ಐ ನಿಂಗಪ್ಪ ಮಾತನಾಡಿದರು.

ಈ ವೇಳೆ ಕೂಲಹಳ್ಳಿ ಸಂಸ್ಥಾನದ ಶ್ರೀ ಪಟ್ಟದ ಚಿನ್ಮಯಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಎಂ.ಪಿ.ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ.ವೀಣಾ, ಜಿಪಂ ಮಾಜಿ ಸದಸ್ಯ ಎಚ್.ಬಿ.ಪರಶುರಾಮಪ್ಪ, ಕುರುಬ ಸಮಾಜದ ತಾಲ್ಲೂಕು ಅಧ್ಯಕ್ಷ ಗೋಣಿಬಸಪ್ಪ, ಪುರಸಭೆ ಸದಸ್ಯರಾದ ಭರತೇಶ್ ಜೋಗಿನರ, ಉದ್ದಾರ ಗಣೇಶ, ಕೂಲಹಳ್ಳಿ ಗ್ರಾಪಂ ಅಧ್ಯಕ್ಷ ಮಂಜುನಾಥ್, ಅಲಮರಸಿಕೆರೆ ಪರಶುರಾಮ, ಗ್ರಾಮದ ಮುಖಂಡರಾದ ಗೌಡ್ರು ಹನುಮಂತಪ್ಪ, ಚಂದ್ರಪ್ಪ, ಗುರುರಾಜ, ಶಿಕ್ಷಕ ಪಿ.ಗಣೇಶ, ಕಟ್ಟಿ ಮಹಾಲಿಂಗಪ್ಪ, ಮುಜ್ಜಜ್ಜಿ ಕೆಂಚಪ್ಪ, ಗೌಡ್ರು ಮಂಜಪ್ಪ, ಬಣಕಾರ ಮಂಜಪ್ಪ, ಟಿ.ಅಶೋಕ, ನೀಲಪ್ಪ ಸೇರಿದಂತೆ ಇತರರು ಇದ್ದರು.

## ಲಯನ್ಸ್ ಅಂತರ್ ರಾಜ್ಯ ಸಭೆಗೆ ಸ್ಥಳೀಯ ಕ್ಲಬ್ಬಿನ ಸದಸ್ಯರು



ದಾವಣಗೆರೆ, ಮೇ 12- ಲಯನ್ಸ್ ಅಂತರ್ ರಾಜ್ಯ ಗ್ಯಾಂಗ್ಟಕ್ ಮತ್ತು ಡಾರ್ಜಿಲಿಂಗ್ ಟ್ವಿನ್ನಿಂಗ್ ಸಭೆ ಹಿನ್ನೆಲೆಯಲ್ಲಿ ಸ್ಥಳೀಯ ಲಯನ್ಸ್ ಕ್ಲಬ್ ಸದಸ್ಯರು ಇಂದಿನಿಂದ ಆರು ದಿನಗಳ ಪ್ರವಾಸ ಕೈಗೊಂಡಿದ್ದಾರೆ.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ಲಯನ್ಸ್ ಜಿಲ್ಲಾ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್, ಜಿಲ್ಲಾ ಛೇರ್ಮನ್ ಆರ್.ಜಿ. ಶ್ರೀನಿವಾಸಮೂರ್ತಿ, ಪ್ರಥಮ ಉಪಾಧ್ಯಕ್ಷ ಎನ್.ಆರ್. ನಾಗಭೂಷಣರಾವ್ ಅವರುಗಳ ನೇತೃತ್ವದಲ್ಲಿ ಈ ಪ್ರವಾಸ ಆರಂಭಿಸಲಾಗಿದೆ ಎಂದು ಪ್ರವಾಸದ ಉಸ್ತುವಾರಿ ವಹಿಸಿರುವ ಖಜಾಂಚಿ ಕಣವಿ ನಟರಾಜ್ ತಿಳಿಸಿದ್ದಾರೆ.

## ಕಾನೂನು ಪಾಲನೆ ಆದ್ಯ ಕರ್ತವ್ಯ: ಜಬ್ಬಾರ್

ದಾವಣಗೆರೆ, ಮೇ 12- ಲೌಡ್ ಸ್ಪೀಕರ್ ಗೆ ಸಂಬಂಧಿಸಿದಂತೆ ಕಾನೂನಿನ ಆದೇಶವನ್ನು ನಾವೆಲ್ಲರೂ ಪಾಲಿಸಲೇಬೇಕೆಂದು ಕೆಪಿಸಿಸಿ ರಾಜ್ಯ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕೆ. ಅಬ್ದುಲ್ ಜಬ್ಬಾರ್ ಹೇಳಿದರು.

ಇಲ್ಲಿನ ನೂರಾನಿ ಶಾದಿಮಹಲ್ ನಲ್ಲಿ ತಂಜೀಮ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮಸೀದಿ ಮುತುವಲ್ಲಿಗಳ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರಸ್ತುತ ದಿನಗಳ ಪರಿಸ್ಥಿತಿಯ ಬಗ್ಗೆ ವಿವರಿಸಿದ ಜಬ್ಬಾರ್, ಈ ಹಿಂದೆ ವಕ್ಫ್ ಇಲಾಖೆ ನೀಡಿರುವ ಸೂಚನೆ ಮೇರೆಗೆ ಕನಿಷ್ಠ ಮಟ್ಟದ ಡೆಸಿಬಲ್ ಬಳಸಿ ನಾವುಗಳು ಪ್ರಾರ್ಥನೆ ಸಲ್ಲಿಸೋಣ ಎಂದು ಸಲಹೆ ನೀಡಿದರು.

ವಕ್ಫ್ ಅಧಿಕಾರಿ ತಂಜೀಮ್ ಆಡಳಿತಾಧಿಕಾರಿ ಸಲೀಮ್ ಪಾಷಾ, ಮೌಲಾನ ಮಹಮ್ಮದ್ ಹನೀಫ್ ರಜಾ, ಉಲೇಮಾಗಳು ತಂಜೀಮ್ ಮಾಜಿ ಅಧ್ಯಕ್ಷರಾದ ಸೈಯದ್ ಸೈಫುಲ್ಲಾ, ಸಾಧಿಕ್ ಪೈಲ್ವಾನ್, ಸೇರಿದಂತೆ ಮುಸ್ಲಿಂ ಮುಖಂಡರುಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಸಲಹಾ ಸಮಿತಿಯ ಸದಸ್ಯ ಅಯೂಬ್ ಪೈಲ್ವಾನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

## ಮೀಸಲಾತಿಗೆ ಪ್ರಯತ್ನ

**(1ನೇ ಪುಟದಿಂದ)** ಅವರು ಹೇಳಿದರು.

ಒಬಿಸಿಯನ್ನು ಪರಿಗಣಿಸುವ ಪ್ರಕ್ರಿಯೆ ಸಮಯ ತೆಗೆದುಕೊಳ್ಳಲಿದೆಯೇ? ಎಂಬ ಪ್ರಶ್ನೆಗೆ ಉತ್ತರಿಸಿ, ಮಧ್ಯಪ್ರದೇಶ ರಾಜ್ಯದವರು ಒಂದು ಆಯೋಗವನ್ನು ರಚಿಸಿ ವರದಿ ತರಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿತ್ತು. ಈ ಸಂದರ್ಭದಲ್ಲಿ ಬಂದ ತೀರ್ಪಿನ ಬಗ್ಗೆ ರಿವ್ಯೂ ಪಿಟಿಷನ್ ಹಾಕಿಕೊಂಡಿದ್ದಾರೆ. ರಾಜ್ಯದಲ್ಲಿ ಮೀಸಲಾತಿ ಬಗ್ಗೆ ಹಲವಾರು ವರದಿಗಳಿದ್ದು, ಅವುಗಳನ್ನು ಬಳಸಿಕೊಳ್ಳುವ ಬಗ್ಗೆಯೂ ಚಿಂತನೆ ನಡೆಯುತ್ತಿದೆ ಎಂದರು.

ಸುಪ್ರೀಂ ಕೋರ್ಟ್‌ನ ಸೂಚನೆಯಂತೆ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಯ ಬಗ್ಗೆ ನಿಖರವಾದ ಅಂಕಿ-ಅಂಶಗಳುಳ್ಳ ವರದಿಯನ್ನು ಸಿದ್ಧಪಡಿಸಲು ಆಯೋಗವನ್ನು ರಚಿಸಲಾಗಿದೆ. ಯಾವೆಲ್ಲ ಸಮುದಾಯಗಳಿಗೆ ಎಷ್ಟು ರಾಜಕೀಯ ಪ್ರಾತಿನಿಧ್ಯ ದೊರಕುತ್ತಿದೆ ಎಂಬ ನಿಖರ ಅಂಕಿ-ಅಂಶಗಳ ಆಧಾರದ ಮೇಲೆ ಹಿಂದುಳಿದ ವರ್ಗಗಳ ಮೀಸಲಾತಿ ನೀಡುವ ಬಗ್ಗೆ ಸುಪ್ರೀಂ ಕೋರ್ಟಿಗೆ ವರದಿ ಸಲ್ಲಿಸಲಾಗುತ್ತದೆ. ಹಿಂದಿನ ಸುಪ್ರೀಂ ಕೋರ್ಟ್ ಆದೇಶವನ್ನು ಈಗಾಗಲೇ ಪಾಲಿಸಲಾಗುತ್ತಿದೆ.

ಪ್ರಸ್ತುತ ಇನ್ನೊಂದು ಆದೇಶ ಬಂದಿದೆ. ಇದರ ಪರಿಣಾಮಗಳ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚಿಸಲಾಗುವುದು ಎಂದರು.

## ಬೈಕ್ ಅಪಘಾತ : ತಂಗಿ ಊರಿಗೆ ತೆರಳುತ್ತಿದ್ದ ತರಗಾರ ಸಾವು

ದಾವಣಗೆರೆ, ಮೇ 12- ಸಹೋದರಿಯ ಮನೆಯ ಕಟ್ಟಡ ನಿರ್ಮಾಣ ಕಾರ್ಯ ನಿಮಿತ್ತ ತೆರಳುವುದಾಗಿ ಹೇಳಿ ಬೈಕ್‌ನಲ್ಲಿ ಹೋಗುವಾಗ ಅಪಘಾತವಾಗಿ ತರಗಾರನೋರ್ವ ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ಆನಗೋಡು ಸೇತುವೆ ರಾಷ್ಟ್ರೀಯ-48ರಲ್ಲಿ ಇಂದು ನಡೆದಿದೆ. ಹೊಸ ಕುಂದುವಾಡ ಗ್ರಾಮದ ರಾಮಚಂದ್ರ (28) ಮೃತನು. ಈತ ಸಿರಿಗೆರೆಯಲ್ಲಿ ತಂಗಿ ಮನೆಗೆ ತರಗಾರ ಕೆಲಸಕ್ಕೆ ತೆರಳುತ್ತಿದ್ದ. ಬುಧವಾರ ಸಂಜೆ ಸಿರಿಗೆರೆಗೆ ಹೋಗುವುದಾಗಿ ಅಣ್ಣನ ಬೈಕ್‌ನಲ್ಲಿ ಹೋಗುವಾಗ ಬೈಕಿನಿಂದ ಬಿದ್ದು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾನೆ.


## ಕೈಲಾಸ ಸಮಾರಾಧನೆ

॥ ಶ್ರೀ ಬೀರಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಹೊನ್ನಮ್ಮದೇವಿ ಪ್ರಸನ್ನ ॥

ಚನ್ನಗಿರಿ ತಾಲ್ಲೂಕು, ತ್ಯಾವಣಿಗೆ ಗ್ರಾಮದ ವಾಸಿ

**ಮಾಳಿಗೇರ ಶ್ರೀಮತಿ ಕೆ. ಸುವರ್ಣಮ್ಮ ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು.

ಆತ್ಮೀಯರೇ, ದಿನಾಂಕ 21-04-2022ನೇ ಗುರುವಾರ ಬೆಳಗ್ಗೆ 3-05ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಮಾಳಿಗೇರ ಕೆ.ಎಂ. ಕರಿಯಪ್ಪ**



ನಿವೃತ್ತ ಅಸಿಸ್ಟೆಂಟ್ ಕೇನ್ ಸೂಪರಿಂಟೆಡೆಂಟ್
ದಾ.ಘ.ಕಂ.ಲಿ. ಕುಕ್ಕವಾಡ. ಹಾಗೂ
ಮಾಜಿ ಅಧ್ಯಕ್ಷರು ಗ್ರಾಮ ಪಂಚಾಯಿತಿ, ತ್ಯಾವಣಿಗೆ

ಜನನ : 26-06-1942 ಮರಣ : 21-04-2022

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 15-05-2022ನೇ ಭಾನುವಾರ ಬೆಳಗ್ಗೆ 10-30 ಕ್ಕೆ ಚನ್ನಗಿರಿ ತಾ॥ ತ್ಯಾವಣಿಗೆ ಗ್ರಾಮದ ಶ್ರೀ ಹೊನ್ನಮ್ಮದೇವಿ ರೈಸ್‌ಮಿಲ್ ಆವರಣದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಚಿರಶಾಂತಿ ಸಭೆ**

ದಿವ್ಯಸಾನಿಧ್ಯ :

**ಶ್ರೀ ಶ್ರೀ ಶ್ರೀ ಈಶ್ವರಾನಂದಪುರಿ ಮಹಾಸ್ವಾಮಿಗಳು**, ಕನಕ ಗುರುಪೀಠ, ಶಾಖಾ ಮಠ, ಹೊಸದುರ್ಗ,
**ಶ್ರೀ ಷ॥ ಬ್ರ॥ ವಿಮಲರೇಣುಕ ವೀರಮುಕ್ತಿ ಮುನಿ ಶಿವಾಚಾರ್ಯ ಸ್ವಾಮಿಗಳು**, ಶ್ರೀ ಮುಕ್ತಿ ಮಂದಿರ ಕ್ಷೇತ್ರ, ಅಧ್ಯಕ್ಷರು - ಅಖಿಲಭಾರತ ವೀರಶೈವ ಶಿವಾಚಾರ್ಯ ಸಂಸ್ಥೆ (ರಿ), ಬೆಂಗಳೂರು.
**ಶ್ರೀ ಶ್ರೀ ಶ್ರೀ ಸದ್ಗುರು ಪರಮಹಂಸ ಮುರಳೀಧರ ಮಹಾಸ್ವಾಮಿಗಳು** ಶ್ರೀ ಚಂದ್ರಗಿರಿ ಮಠ, ಹೊಸಹಳ್ಳಿ-ಹದಡಿ.

ಮುಖ್ಯ ಅತಿಥಿಗಳು :

**ಶ್ರೀ ಡಾ॥ ಶಾಮನೂರು ಶಿವಶಂಕರಪ್ಪನವರು** ಮಾಜಿ ಸಚಿವರು ಹಾಗೂ ಹಾಲಿ ಶಾಸಕರು, ದಾವಣಗೆರೆ ದಕ್ಷಿಣ.
**ಶ್ರೀ ಎಸ್. ರಾಮಪ್ಪನವರು**, ಶಾಸಕರು, ಹರಿಹರ.
**ಶ್ರೀ ಹೆಚ್.ಎಂ. ರೇವಣ್ಣನವರು**, ಮಾಜಿ ಸಚಿವರು, ಮಾಗಡಿ.
**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು**, ಮಾಜಿ ಸಚಿವರು, ದಾವಣಗೆರೆ.
**ಶ್ರೀ ಯತೀಂದ್ರ ಸಿದ್ಧರಾಮಯ್ಯನವರು**, ಶಾಸಕರು, ವರುಣ.
**ಶ್ರೀ ಎಸ್.ಎಸ್. ಗಣೇಶ್‌ರವರು**, ಬೃಹತ್ ಕೈಗಾರಿಕೋದ್ಯಮಿಗಳು, ದಾವಣಗೆರೆ.
**ಶ್ರೀ ಜಿ.ಎಂ. ಸಿದ್ದೇಶ್ವರ್‌ರವರು**, ಮಾಜಿ ಕೇಂದ್ರ ಸಚಿವರು ಹಾಗೂ ಹಾಲಿ ಲೋಕಸಭಾ ಸದಸ್ಯರು, ದಾವಣಗೆರೆ,
**ಶ್ರೀ ಎಸ್.ಎ. ರವೀಂದ್ರನಾಥ್‌ರವರು**, ಶಾಸಕರು, ದಾವಣಗೆರೆ ಉತ್ತರ.
**ಶ್ರೀ ಪ್ರೊ. ಲಿಂಗಣ್ಣರವರು**, ಶಾಸಕರು, ಮಾಯಕೊಂಡ.
**ಶ್ರೀ ಮಾಡಾಳ್ ವಿರುಪಾಕ್ಷಪ್ಪನವರು**, ಶಾಸಕರು ಚನ್ನಗಿರಿ ಹಾಗೂ ಅಧ್ಯಕ್ಷರು-ಕೆ.ಎಸ್.ಡಿ.ಎಲ್
**ಶ್ರೀ ಬಸವರಾಜ ನೀಲಪ್ಪ ಶಿವಣ್ಣನವರು**, ಮಾಜಿ ಸಚಿವರು, ಹಾವೇರಿ,
**ಶ್ರೀ ಬಸವರಾಜನಾಯ್ಕರವರು**, ಮಾಜಿ ಶಾಸಕರು, ಮಾಯಕೊಂಡ.
**ಶ್ರೀ ಮಹಿಮಾ ಪಟೇಲ್‌ರವರು**, ಮಾಜಿ ಶಾಸಕರು, ಚನ್ನಗಿರಿ.
**ಶ್ರೀ ಹೆಚ್.ಬಿ. ಮಂಜಪ್ಪನವರು**, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ದಾವಣಗೆರೆ.
**ಶ್ರೀ ಹೆಚ್.ಜೆ. ಸಂಗಪ್ಪನವರು**, ಮಾಜಿ ಅಧ್ಯಕ್ಷರು, ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ., ದಾವಣಗೆರೆ.

ಇಂತಿ ದುಃಖತಪ್ತರು : ಮಾಳಿಗೇರ ಶ್ರೀಮತಿ ಕೆ. ಸುವರ್ಣಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಮಾಳಿಗೇರ ವಂಶಸ್ಥರು ತ್ಯಾವಣಿಗೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ. : 9663911999, 8197035708

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



## ಪ್ರಥಮ ವರ್ಷದ ಚಿರಸ್ಮರಣೆ



**ದಿ॥ ಶ್ರೀಮತಿ ಶಾರದಮ್ಮನವರು ಆನೆಕೊಂಡದ ಮಠ**

**ಶಿವೈಕ್ಯ : 13.05.2021**

**(ಆನೆಕೊಂಡ ಮಠದ ಶ್ರೀ ಎಂ. ಮಹದೇವಯ್ಯ ಇವರ ಧರ್ಮಪತ್ನಿ)**

*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.*
*ಸದಾ ನಿಮ್ಮ ಚಿರ ನೆನಪಿನಲ್ಲಿರುವ*

**ಶ್ರೀ ಮಹದೇವಯ್ಯ ಮತ್ತು ಮಕ್ಕಳು ಸೊಸೆ ಹಾಗೂ ಮೊಮ್ಮಕ್ಕಳು**

ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, ದಾವಣಗೆರೆ.



## ಮೂರನೇ ವರ್ಷದ ಪುಣ್ಯಸ್ಮರಣೆ



**ಲಿಂ॥ ಚಂದ್ರಮ್ಮನವರು**

**ನಿಧನ : 13.05.2019**

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು, ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....

**ಪತಿ : ಶ್ರೀ ಹರಿಯಪ್ಪ ಜಿ.ಬಿ.**
**ಮಗ : ಶ್ರೀ ಬಿ.ಹೆಚ್. ಚೇತನ್ ಕುಮಾರ್ ಶ್ರೀಮತಿ ಅಶ್ವಿನಿ ಚೇತನ್**
**ಮಗಳು : ಬಿ.ಹೆಚ್. ವಾಣಿಶ್ರೀ, ಶ್ರೀ ಬಸವರಾಜ್ ಬಿ.ಆರ್.**
**ಮೊಮ್ಮಕ್ಕಳಾದ : ಚಿ॥ ಸಂಜಯ್ ಭಾರ್ಗವ್, ಚಿ॥ ರವಿಶಂಕರ್**
**ಪುಟಾಣಿ : ಚಿನ್ಮಯಿ ಜಿ.ಸಿ., ರೋಹನ್ ಜಿ.ಸಿ.**


### ಶತಾಯುಷಿ ಲೋಕಿಕೆರೆ ಸುಟ್ಟವ್ವರ ಹನುಮಂತಪ್ಪ ನಿಧನ



ದಾವಣಗೆರೆ ತಾಲ್ಲೂಕು ಲೋಕಿಕೆರೆ ಗ್ರಾಮದ ವಾಸಿ ಸುಟ್ಟವ್ವರ ಹನುಮಂತಪ್ಪ (110) ಅವರು ದಿನಾಂಕ 12.05.2022ರ ಗುರುವಾರ ಬೆಳಿಗ್ಗೆ 7.30ಕ್ಕೆ ನಿಧನರಾಗಿದ್ದಾರೆ. ಓರ್ವ ಪುತ್ರಿ, ಇಬ್ಬರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 13.05.2022ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಲೋಕಿಕೆರೆ ಗ್ರಾಮದಲ್ಲಿ ನೆರವೇರಲಿದೆ.

### ಸಲ್ಲೇಖನ ಸಮಾಧಿ ಮರಣ



ದಾವಣಗೆರೆ ದೇವರಾಜ್ ಅರಸ್ ಬಡಾವಣೆ 'ಸಿ' ಬ್ಲಾಕ್ 1ನೇ ಕ್ರಾಸ್ ವಾಸಿ ಶ್ರೀಮತಿ ಸಾವಿತ್ರಮ್ಮ ಅನಂತರಾಜ್ ವನಕುದುರಿ (85) ಅವರು ದಿನಾಂಕ 12.05.2022ರ ಗುರುವಾರ ಮಧ್ಯಾಹ್ನ 1.45ಕ್ಕೆ ಜೈನ ಧರ್ಮದ ಪ್ರಕಾರ "ಯಮ ಸಲ್ಲೇಖನ ಸಮಾಧಿ ಮರಣ" ಹೊಂದಿರುತ್ತಾರೆ. ಪತಿ, ಓರ್ವ ಪುತ್ರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಇವರ ಅಂತ್ಯಕ್ರಿಯೆಯು ದಿನಾಂಕ 12.05.2022ರ ಸಂಜೆ 6 ಗಂಟೆಗೆ ಪಿ.ಬಿ. ರಸ್ತೆ ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.

### ಅಪರಿಚಿತ ವ್ಯಕ್ತಿಯ ಶವ ಪತ್ತೆ

ದಾವಣಗೆರೆ, ಮೇ 12- ದಾವಣಗೆರೆ-ತೋಳಹುಣಸೆ ರೈಲು ನಿಲ್ದಾಣಗಳ ಮಧ್ಯೆ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದ್ದು, ವಾರಸುದಾರರು ಪತ್ತೆಯಾಗಿರು ವುದಿಲ್ಲ. ಸುಮಾರು 55-60 ವಯಸ್ಸಿನ ಈತ, ಗೋಧಿ ಮೈ ಬಣ್ಣ, ತೆಳುವಾದ ಮೈಕಟ್ಟು, ಕೋಲು ಮುಖ, ಬಿಳಿ ಮತ್ತು ಕಪ್ಪು ಬಣ್ಣ ಮಿಶ್ರಿತ ತಲೆ ಕೂದಲು, ಕುರುಚಲು ಗಡ್ಡ, ಮೀಸೆ ಹೊಂದಿದ್ದಾನೆ. ಸಂಬಂಧಪಟ್ಟವರು ರೈಲ್ವೆ ಪೊಲೀಸ್ ಠಾಣೆ (08192-259643) ಅಥವಾ 94808 00469, 9480802123 ಕ್ಕೆ ಸಂಪರ್ಕಿಸಬಹುದು.

# ಶರಣರ ತತ್ವದ ಮಠಗಳು ಸೌಹಾರ್ದತೆ ಬೆಳೆಸುತ್ತಿವೆ

## ಮುಸ್ಲಿಂ ಮುಖಂಡರು ಹಾಗೂ ಪ್ರಗತಿಪರರ ನಿಯೋಗದ ಸತ್ಕಾರ ಸಮಾರಂಭದಲ್ಲಿ ವಚನಾನಂದ ಶ್ರೀ

ಮಲೇಬೆನ್ನೂರು, ಮೇ 12- ನಾಡಿನಲ್ಲಿ ರುವ ಬಸವಾದಿ ಶರಣರ ತತ್ವ ಆಧಾರಿತ ಮಠಗಳು ಕೋಮು ಸೌಹಾರ್ದತೆ ಬೆಳೆಸುತ್ತಿವೆ ಎಂದು ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ಶ್ರೀ ಮಠದಿಂದ ಏಪ್ರಿಲ್ 23 ಮತ್ತು 24 ರಂದು ಸ್ವಾತಂತ್ರ್ಯ ಅಮೃತ ಮಹೋತ್ಸವ ನಿಮಿತ್ತ ಸ್ವಾತಂತ್ರ್ಯ ಹೋರಾಟಗಾರರ ಪುಸ್ತಕ ಬಿಡುಗಡೆ, ಬೃಹತ್ ಉದ್ಯೋಗ ಮೇಳವನ್ನು ಜಾತ್ಯತೀತವಾಗಿ ಆಯೋಜಿಸಿದ್ದಕ್ಕೆ ಮಂಗಳವಾರ ನಗರದ ಮುಸ್ಲಿಂ ಮುಖಂಡರು ಹಾಗೂ ಪ್ರಗತಿಪರರ ನಿಯೋಗದಿಂದ ಸತ್ಕಾರ ಸ್ವೀಕರಿಸಿ ಅವರು ಮಾತನಾಡಿದರು.

ಜಾತಿ, ಧರ್ಮದ ಆಧಾರದಲ್ಲಿ ಭೇದಿ, ಭಾವ ಸೃಷ್ಟಿಸಬಾರದು. ಭಾರತ ಎಂದರೆ ಸಹಿಷ್ಣುತೆಗೆ ಪ್ರಸಿದ್ಧಿ. ಎಲ್ಲಾ ಧರ್ಮ, ಜಾತಿ, ಜನಾಂಗ, ಪ್ರಾಂತ್ಯದ ಜನರು ಸಾಮರಸ್ಯದಿಂದ ಇರಬೇಕು. ಸಹಜ ಬದುಕಿಗೆ ಆದ್ಯತೆ ನೀಡುವ ಯಾರೂ ಕೂಡ ಕೋಮು ಸಾಮರಸ್ಯ ಹದಗೆಡಿಸಲು ಮುಂದಾಗುವುದಿಲ್ಲ ಎಂದರು.

ಮಹಾಭಾರತದಲ್ಲಿ ಕುಬ್ಜ ರಾಕ್ಷಸನಿದ್ದ. ಆತ ಪಾಂಡವರೊಡನೆ ಜಗಳವಾಡುತ್ತಿದ್ದನು, ಜಗಳ ಆಡಿದಷ್ಟು ಆತ ಎತ್ತರವಾಗಿ ಬೆಳೆದು ಪಾಂಡವರಿಗೆ ತಲೆನೋವಾದ. ಆಗ ಕೃಷ್ಣ ಪ್ರೀತಿಯಿಂದ ಮಾತನಾಡಿ ಕುಬ್ಜ ರಾಕ್ಷಸನನ್ನು ಮತ್ತೆ ಕುಬ್ಜನಾಗಿಸಿದ, ಅದೇ ರೀತಿ, ಪ್ರತಿಕ್ರಿಯಿಸಿದಷ್ಟು ಕೋಮು ದ್ವೇಷ ಬೆಳೆಸುವವರಿಗೆ ಶಕ್ತಿ ಬರುತ್ತದೆ. ಅವರ ದ್ವೇಷದ ಹೇಳಿಕೆ, ಕೃತ್ಯಗಳಿಗೆ ಪ್ರೀತಿಯಿಂದಲೇ ಉತ್ತರಿಸಬೇಕು. ಕುಬ್ಜರು, ಅಲ್ಪರ ಕ್ರಿಯೆಗಳಿಗೆ ಪ್ರತಿಕ್ರಿಯೆ ನೀಡಬಾರದೆಂದು ಕಿವಿ ಮಾತು ಹೇಳಿದರು.

ಎಲ್ಲಾ ಧರ್ಮ, ಜಾತಿ, ರಾಜಕೀಯ ಪಕ್ಷಗಳಲ್ಲಿ ಒಳ್ಳೆಯವರ ಸಂಖ್ಯೆ ಶೇ.90ರಷ್ಟಿದೆ. ಆದರೆ ಅವರು ಕ್ರಿಯಾಶೀಲವಾಗದಿರುವುದರಿಂದ ಅಲ್ಪರಿಗೆ ಆದ್ಯತೆ ಸಿಗುತ್ತಿದೆ ಎಂದ ಅವರು, ಉತ್ತರ ಕರ್ನಾಟಕ ಭಾಗದಲ್ಲಿ ಮುಸಲ್ಮಾನರಲ್ಲಿನ ಪಿಂಜಾರ್, ನದಾಫ್ ಪಂಗಡದವರು ಪಂಚಮಸಾಲಿ ಸಮಾಜದವ ರೊಂದಿಗೆ ಸಹೋದರರಾಗಿ ಬಾಳುತ್ತಿದ್ದಾರೆ ಎಂದರು.

ಎಲ್ಲಾ ಧರ್ಮೀಯರಿಗೂ ಮಠದ ಬಾಗಿಲು ಸದಾ ತೆರೆದಿರುತ್ತದೆ. ಎಲ್ಲರೂ ಸೇರಿಕೊಂಡು ಬದುಕೋಣ. ಸಮಾಜದಲ್ಲಿ ಸಾಮರಸ್ಯ, ಸಹೋದರತ್ವ ಬೆಳೆಸೋಣ. ಯಾವುದೇ ವಿಷಯ ಇದ್ದರೂ ಕುಳಿತು ಚರ್ಚಿಸೋಣ ಎಂದರು.

ನಿಯೋಗದ ನೇತೃತ್ವ ವಹಿಸಿದ್ದ ಲೇಖಕ ಜೆ. ಕಲೀಂಬಾಷಾ ಮಾತನಾಡಿ, ಪಂಚಮಸಾಲಿ ಮಠದ ತತ್ವಗಳು ಮಾದರಿಯಾಗಿವೆ. ಕೋಮು ದ್ವೇಷ ಬೆಳೆಸುತ್ತಿರುವವರಿಗೆ ಮಠದ ತತ್ವಗಳು ಆದರ್ಶವಾಗಲಿ ಎಂದರು.

ನಿಯೋಗದಲ್ಲಿ ಜಮಾತೆ ಇಸ್ಲಾಮಿ ಹಿಂದ್‌ನ ತಾಲ್ಲೂಕು ಅಧ್ಯಕ್ಷ ಡಾ.ಗುಲಾಮ್ ನಬಿ, ಅಂಜುಮನ್ ಸಂಸ್ಥೆ ಮಾಜಿ ಅಧ್ಯಕ್ಷ ಹಾಜಿ ಅಲಿ ಖಾನ್, ನಗರಸಭೆ ಮಾಜಿ ಸದಸ್ಯ ಬಾಂಬೆ ರೆಹಮಾನ್, ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಆಬಿದ್ ಅಲಿ, ಸಮಾಜ ಸೇವಕ ಎಂ.ಆರ್.ಸೈಯದ್ ಸನಾಉಲ್ಲಾ, ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಗನ್ನಾಥ್, ದಲಿತ ಸಂಘರ್ಷ ಸಮಿತಿ ಸಂಚಾಲಕ ಪಿ.ಜೆ.ಮಹಾಂತೇಶ್, ಹುಲಿಕಟ್ಟಿ ಚನ್ನಬಸಪ್ಪ, ಎ.ಡಿ.ಕೊಟ್ರಬಸಪ್ಪ, ಮನ್ಸೂರ್ ಅಲಿ ಭಾನುವಳ್ಳಿ, ಆಸಿಫ್ ಬಾಷಾ ಇದ್ದರು.



### ಯೋಗ ನಮಾಜ್‌ಗೆ ಸಹಾಯಕ: ವಚನಾನಂದ ಶ್ರೀ

ಯೋಗಾಭ್ಯಾಸ ಮಾಡುವುದರಿಂದ ಮುಸಲ್ಮಾನ ಬಂಧುಗಳಿಗೆ ಐದು ಹೊತ್ತು ನಮಾಜ್ ಮಾಡಲು ಅನುಕೂಲವಾಗುತ್ತದೆ. ಯೋಗದಿಂದ ದೇಹ ಸಡಿಲವಾಗುತ್ತದೆ. ಐದು ನಿಮಿಷದ ಬದಲು ಹತ್ತು ನಿಮಿಷದ ಅವಧಿವರೆಗೂ ನಮಾಜ್ ಮಾಡಬಹುದು. ನಮಾಜ್‌ನಲ್ಲೂ ಯೋಗದ ಆರೇಳು ಆಸನಗಳಿವೆ.

ಸೌದಿ ಅರೇಬಿಯಾದಲ್ಲಿ ಅಲ್ಲಿನ ಯುವರಾಜರು ಯೋಗ ಫೌಂಡೇಷನ್ ಸ್ಥಾಪಿಸಿದ್ದಾರೆ. ಅಲ್ಲಿಯೂ ಯೋಗದ ಕುರಿತು ಅಲ್ಲಿನ ಸರ್ಕಾರ ಪ್ರಚಾರ ಮಾಡುತ್ತಿದೆ. ಯೋಗಾಭ್ಯಾಸಕ್ಕೆ ಯಾವುದೇ ಧರ್ಮ, ಜಾತಿಯ ಲೇಪನವಿಲ್ಲ. ಜಗತ್ತಿಗೆ ಭಾರತ ನೀಡಿದ ಅಮೂಲ್ಯ ಕೊಡುಗೆ ಯೋಗವಾಗಿದೆ ಎಂದು ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

# ರಾಣೇಬೆನ್ನೂರು : ಬೆಳೆ ವಿಮೆ ಗೋಲ್ಮಾಲ್

### ತನಿಖೆ ನಡೆಸಲು ಒತ್ತಾಯ

ರಾಣೇಬೆನ್ನೂರು, ಮೇ 12- ಬೆಳೆದ ಬೆಳೆಗಳು ನಾಶಗೊಂಡಂತಹ ಸಂದರ್ಭದಲ್ಲಿ ರೈತರಿಗೆ ಜೀವಾಮೃತವಾಗಲೆಂದು ಬೆಳೆ ವಿಮೆಯಂತಹ ಯೋಜನೆಯನ್ನು ಈ ಹಿಂದಿನ ಸರ್ಕಾರಗಳು ಮಾಡಿದ್ದು, ಈಗ ಆ ಯೋಜನೆ ನಾನಾ ಕಾರಣಗಳಿಂದ ಹಳ್ಳ ಹಿಡಿಯುತ್ತಿದ್ದು, ಬೆಳೆ ವಿಮೆ ತುಂಬಿಸಿಕೊಂಡ ಕಂಪನಿಗಳು ಸರ್ಕಾರದ ಕೈಗೊಂಬೆಯಾಗಿ ಪ್ರಭಾವಿ ಮಂತ್ರಿ, ಮಹೋದಯರ ಒಳ ಒಪ್ಪಂದಕ್ಕೆ ಒಳಗಾಗುತ್ತಿರುವುದು ರೈತರಲ್ಲಿ ದಿಗ್ಭ್ರಮೆ ಮೂಡಿಸಿದೆ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಆರೋಪಿಸಿದ್ದಾರೆ.

ಬೆಳೆ ಸಮೀಕ್ಷೆಯ ಸಂದರ್ಭದಲ್ಲಿನ ಗೊಂದಲಗಳು 'ಗ್ರಾಮ ಪಂಚಾಯ್ತಿ ಮಟ್ಟ' ಎನ್ನುವ ಅವೈಜ್ಞಾನಿಕ ನೀತಿ, ಇನ್ನೂ ಪರಿಪೂರ್ಣವಾಗದ ರೈತನ ಆಧಾರ್ ಮತ್ತು ಬ್ಯಾಂಕ್ ವಿವರದ ಲಿಂಕ್, ಕೆಲವು ಬ್ಯಾಂಕ್‌ಗಳ ವಿಲೀನದಿಂದ ಮೊದಲಿನ ಬ್ಯಾಂಕಿನಿಂದ ವಿಲೀನಗೊಂಡ ಬ್ಯಾಂಕಿಗೆ ರೈತನ ಆಧಾರ್ ಕಾರ್ಡ್, ಬ್ಯಾಂಕ್ ವಿವರಗಳು ಹಾಗೂ ಎನ್.ಪಿ.ಸಿ.ಐ ಇದುವರೆಗೂ ಲಿಂಕ್ ಆಗದೇ ಇರುವದರಿಂದ ಸಾಲ ಸೋಲ ಮಾಡಿ ಸಾವಿರಾರು ರೂ. ಖರ್ಚು ಮಾಡಿ ಬೆಳೆ ವಿಮೆ ಕಂತು ತುಂಬಿದ ರೈತನಿಗೆ ಇನ್ಸೂರೆನ್ಸ್ ಕಂಪನಿಗಳು ಸರ್ಕಾರದೊಂದಿಗೆ ಸೇರಿ ಮಕ್ಮಲ್ ಟೋಪಿ ಹಾಕುತ್ತಲಿದ್ದರೂ ಅದನ್ನರಿಯದೇ ಹೋದ ರೈತ, ಪ್ರತಿ ವರ್ಷ ಮೋಸಕ್ಕೆ ಒಳಗಾಗುತ್ತಿದ್ದಾನೆ.

ತಾಂತ್ರಿಕ ದೋಷಗಳನ್ನು ನೆಪವಾಗಿಟ್ಟುಕೊಂಡು ರೈತರಿಗೆ ಮೋಸ ಮಾಡಲಿಕ್ಕೆ ಶಕ್ತಿ ತುಂಬುವಂತಿರುವ ಸರ್ಕಾರದ ಅವೈಜ್ಞಾನಿಕ ನೀತಿಗಳನ್ನು ಬಂಡವಾಳವನ್ನಾಗಿಟ್ಟುಕೊಂಡು ಅತ್ಯಂತ ಸರಳ ರೀತಿಯಲ್ಲಿ ರೈತರಿಗೆ ಮಕ್ಮಲ್ ಟೋಪಿ ಹಾಕುತ್ತಿರುವ ಬಹುದೊಡ್ಡ ಗೋಲ್ಮಾಲ್ ದಂಧೆ ಬೆಳೆ ವಿಮೆಯಲ್ಲಿ ನಡೆದಿದೆ. ಇದರ ಬಗ್ಗೆ ಗಂಭೀರ ತನಿಖೆಯಾಗಬೇಕು.

ಒಂದು ವರ್ಷ ಒಂದೆರಡು ಮುಂಗಾರು ಮಳೆಯಾಶ್ರಿತ ಗ್ರಾಮ ಪಂಚಾಯಿತಿಗಳೇ ಒಂದೆರಡು ನೀರಾವರಿ ರಹಿತ ಗ್ರಾಮ ಪಂಚಾಯಿತಿಗಳಿಗೆ ಆಯ್ದ ಕೆಲವೇ ಕೆಲವು ಬೆಳೆಗಳಿಗೆ ವಿಮೆ ಹಣ ಮಂಜೂರು ಮಾಡಿ, ರೈತರಿಗೆ ಆಸೆ ಹುಟ್ಟಿಸಿ, ನಂತರದಲ್ಲಿ ಕನಿಷ್ಠ 3 ವರ್ಷ ಯಾವುದೇ ರೀತಿ ಬೆಳೆ ವಿಮೆ ಜಾರಿಯಾಗದ ರೀತಿಯಲ್ಲಿ ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಿರುವ ಇನ್ಸೂರೆನ್ಸ್ ಕಂಪನಿಯ ನಾಟಕ ಈಗ ಬಯಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಅತಿವೃಷ್ಟಿಯಾಗಿ ಬೆಳೆ ನಾಶಗೊಂಡಿದ್ದನ್ನು ತಾಂತ್ರಿಕತೆಯಿಂದ ನೋಡಿಯಾದರೂ ಬೆಳೆ ವಿಮೆ ಜಾರಿ ಮಾಡಬಹುದಾಗಿತ್ತು. ಆದರೆ ಹಾಗಾಗಲಿಲ್ಲ, ಸರ್ಕಾರ ಮತ್ತು ಇನ್ಸೂರೆನ್ಸ್ ಕಂಪನಿಗಳು ಇದಕ್ಕೆ ಏನು ಹೇಳುತ್ತಾರೆ ? ಇಲ್ಲಿ ಹೋರಾಟ ಮಾಡಿ ಜಾಗೃತರಾದ ರೈತರ ಬಗ್ಗೆ ಗಮನಹರಿಸಿ ಬಾಯಿ ಮುಚ್ಚಿಸುವ ತಂತ್ರವನ್ನು ವ್ಯವಸ್ಥಿತವಾಗಿ ಈ ವಿಮಾ ಕಂಪನಿಗಳವರು ಮಾಡುತ್ತಲೇ ಬಂದಿದ್ದಾರೆ.

2020-21 ನೇ ಸಾಲಿನಲ್ಲಿ ಎಲ್ಲ ರೈತರು ನಮ್ಮ ರಾಣೇಬೆನ್ನೂರು ತಾಲ್ಲೂಕಿನಲ್ಲಿ ಬೆಳೆ ವಿಮೆ ತುಂಬಿದ್ದರು. ಅತಿವೃಷ್ಟಿಯಾಗಿ ಬೆಳೆಗಳೆಲ್ಲ ಸರ್ವ ನಾಶಗೊಂಡವು. ಆದರೆ ಕೇವಲ ತಾಲ್ಲೂಕಿನ ಹರನಗಿರಿ ಗ್ರಾಮ ಪಂಚಾಯ್ತಿ ಮಟ್ಟಕ್ಕೆ ಮಾತ್ರ ಬೆಳೆ ವಿಮೆ ಮಂಜೂರು ಮಾಡಿ ಇನ್ಸೂರೆನ್ಸ್ ಕಂಪನಿಯವರು ರೈತರ ಕಣ್ಣಿಗೆ ಮಣ್ಣೆರಚಿದ್ದನ್ನು ಇಲ್ಲಿ ಸೂಕ್ಷ್ಮವಾಗಿ ಗಮನಿಸಬಹುದು.

ರಾಜ್ಯದ ರೈತರು ಆರ್ಥಿಕ ಸಂಕಷ್ಟದಲ್ಲಿದ್ದು, ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಇಲ್ಲದಂತಾಗಿದೆ. ರೈತರ ಆತ್ಮಹತ್ಯೆಗೆ ಕೇವಲ ಸಾಲವೊಂದೇ ಕಾರಣವಲ್ಲ. ಇಂಥ ಅವೈಜ್ಞಾನಿಕ ಬೆಳೆ ವಿಮೆ ನೀತಿ ಸರ್ಕಾರದ ಆದೇಶಗಳೂ ಕೂಡಾ ಕಾರಣವಾಗುತ್ತವೆ. ಚುನಾವಣಾ ವರ್ಷದಲ್ಲಿ ಈ ಬೆಳೆ ವಿಮೆ ಹಗರಣ ಮಾಡಿ ಸಿಕ್ಕಷ್ಟು ಬಾಚಿಕೊಳ್ಳುತ್ತೇವೆ ಎನ್ನುವ ಸ್ಥಿತಿಯಲ್ಲಿರುವ ಈ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಪಾಟೀಲರು ಎಚ್ಚರಿಸಿದ್ದಾರೆ.

## ಅವಧಿಗೆ ಮೊದಲೇ ಮುಂಗಾರಿನ ಸೂಚನೆ

(1ನೇ ಪುಟದಿಂದ) ಬಿಸಿಲಿನಿಂದ ಬಳಲುತ್ತಿರುವುದರಿಂದ, ಮುಂಗಾರು ಅವಧಿಗೆ ಮುಂಚೆ ಬಂದಿರುವುದು ನಿರಾಳತೆ ತರಲಿದೆ. ಮುಂದಿನ ಐದು ದಿನಗಳಲ್ಲಿ ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳಲ್ಲಿ ವ್ಯಾಪಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

# ಹರೀಶ್ ಜನ್ಮದಿನ : ಅಭಿಮಾನಿ ಬಳಗದಿಂದ ಬೃಹತ್ ಮೆರವಣಿಗೆ

ಹರಿಹರ ಮೇ 12 - ನಗರದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್ ಅವರ ಹುಟ್ಟು ಹಬ್ಬದ ನಿಮಿತ್ತವಾಗಿ ಶ್ರೀ ಕಸಬಾ ಗ್ರಾಮದೇವತೆ ಊರಮ್ಮ ದೇವಿಗೆ ಮಧ್ಯಾಹ್ನ ವಿಶೇಷ ಪೂಜೆ ಸಲ್ಲಿಸಿ ನಂತರ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ಹರೀಶ್ ಅಭಿಮಾನಿಗಳ ಬಳಗದ ವತಿಯಿಂದ ಬೃಹತ್ ಮೆರವಣಿಗೆ ನಡೆಯಿತು.



ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ರಸ್ತೆಯಲ್ಲಿ ಸಂಚರಿಸಿ, ಸಿದ್ದೇಶ್ವರ ಪ್ಯಾಲೇಸ್‌ನಲ್ಲಿ ಅಂತ್ಯ ಗೊಂಡಿತು. ಅಭಿಮಾನಿಗಳು, ಕಾರ್ಯಕರ್ತರು ಪಾಲ್ಗೊಂಡು ಮೆರವಣಿಗೆಯಲ್ಲಿ ಕುಣಿದು ಮೆರವಣಿಗೆಗೆ ಮೆರಗು ನೀಡಿದರು.

ಹಿರಿಯ ಮುಖಂಡ ಎನ್.ಜಿ. ನಾಗನಗೌಡ್ರು, ಬಿಜೆಪಿ ಜಿಲ್ಲಾ ಅಧ್ಯಕ್ಷ ಹನಗವಾಡಿ ಎಸ್.ಎಂ. ವೀರೇಶ್, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ಜೀವನಮೂರ್ತಿ, ಹನುಮಂತಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಅಣ್ಣಪ್ಪ ಐರಣಿ, ದೇವೇಂದ್ರಪ್ಪ ಕುಣೆಬೆಳಕೆರೆ, ಬಾತಿ ಚಂದ್ರಶೇಖರ್, ಹಲಸಬಾಳು ಶಿವಾನಂದಪ್ಪ, ಬೆಳ್ಳೂಡಿ ರಾಮಚಂದ್ರಪ್ಪ, ತುಳಜಪ್ಪ ಭೂತೆ, ಹೆಚ್. ಮಂಜಾನಾಯ್ಕ್, ಗ್ರಾಮೀಣ ಘಟಕದ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಮಿಠಾಯಿ ಅರುಣ್ ಕುಮಾರ್, ರೂಪಾ ಕಾಟ್ವೆ, ಕೆಂಚನಳ್ಳಿ ಮಹಾಂತೇಶಪ್ಪ, ಅಜ್ಜಪ್ಪ, ಮಾರುತಿ ಶೆಟ್ಟಿ, ಅಜಿತ್ ಸಾವಂತ್, ಬಕ್ಕೇಶ್ ಬೆಳ್ಳೂಡಿ, ರವಿ ರಾಯ್ಕರ್, ಮಂಜುನಾಥ್, ಗಂಗನಹರಸಿ ಉಮೇಶ್, ಸ್ವಾತಿ ಹನುಮಂತಪ್ಪ, ರಾಜು ರೋಖಡೆ, ಸುನಿಲ್, ಪ್ರಮೀಳಾ ನಲ್ಲೂರು, ಗಿರೀಶ್ ಗೌಡ, ಹನಗವಾಡಿ ಗಂಗಾಧರಪ್ಪ, ಬೆಳಕೇರಿ ಚಂದ್ರಪ್ಪ, ಗುಡಿಮನೆ ಸಂತೋಷ, ಅದ್ವೈತ್ ಶಾಸ್ತ್ರಿ, ವೀರಣ್ಣ ಕೊಂಡಜ್ಜಿ, ಶಾಮ್ ಮಾಯಕೊಂಡ, ಲೋಕಿಕೆರೆ ನಾಗರಾಜ್, ಗೀತಮ್ಮ ಕುಮಾರನಹಳ್ಳಿ ಮಹೇಶಪ್ಪ, ಸಿರಿಗೆರೆ ಹಾಲೇಶಪ್ಪ, ಕಲ್ಲೇಶ್ ಬೆಳ್ಳೂಡಿ, ಸಿರಿಗೆರೆ ಕುಮಾರ್, ಪ್ರಭು ವಾಹಿನಿ, ನಾಗರಾಜ್ ಅಮರಾವತಿ, ಪಾಲಾಕ್ಷಪ್ಪ ಅಮರಾವತಿ, ಕಡರನಾಯಕನಳ್ಳಿ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

# ಟೊಮ್ಯಾಟೋ ಜ್ವರ ಕೇರಳದ ಕೆಲ ಪ್ರದೇಶಗಳಿಗೆ ಸೀಮಿತ

ಬೆಂಗಳೂರು, ಮೇ 12 - ಕೇರಳದ ಕೆಲ ಜಿಲ್ಲೆಗಳಲ್ಲಿ ಕಂಡು ಬಂದಿರುವ ಟೊಮ್ಯಾಟೋ ಜ್ವರಕ್ಕೂ ಕೊರೊನಾಕ್ಕೂ ಯಾವುದೇ ಸಂಬಂಧವಿಲ್ಲ. ಇದು ಕೇವಲ ಕೇರಳದ ಕೆಲ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಸ್ಪಷ್ಟಪಡಿಸಿದ್ದಾರೆ.

**ಹೊಸದಲ್ಲದ ಈ ಜ್ವರದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಬರುವ ತಪ್ಪು ಮಾಹಿತಿ ನಂಬದಂತೆ ಸಚಿವ ಸುಧಾಕರ್ ಕಿವಿಮಾತು**

ಟೊಮ್ಯಾಟೋ ಫ್ಲೂ ಹೊಸದಾಗಿ ಬಂದಿರುವ ಜ್ವರ ಅಲ್ಲ. ಇದು ಕೇರಳದಲ್ಲಿ ಕೆಲ ವರ್ಷಗಳಿಂದ ಕಾಣಿಸಿಕೊಳ್ಳು ತ್ತಿದೆ. ಇದು ಕೇವಲ ಕೆಲ ಪ್ರದೇಶಗಳಲ್ಲಿ ಮಾತ್ರ ಕಾಣಿಸಿ ಕೊಂಡಿದೆ. 5 ವರ್ಷಕ್ಕಿಂತ ಕೆಳಗಿನ ಮಕ್ಕಳಲ್ಲಿ ಜ್ವರ ಹಾಗೂ ಚರ್ಮದ ಮೇಲೆ ಗುಳ್ಳೆಗಳು ಕಾಣಿಸಿಕೊಳ್ಳು ತ್ತಿವೆ. ಕೇರ ಳದಲ್ಲಿ ಆರೋಗ್ಯ ಇಲಾಖೆ ಇದಕ್ಕೆ ಚಿಕಿತ್ಸೆಗಳನ್ನು ನೀಡು ತ್ತಿದೆ. ಕೇರಳ ಆರೋಗ್ಯ ಇಲಾಖೆಯ ಜೊತೆ ಕರ್ನಾಟಕದ ಆರೋಗ್ಯ ಇಲಾಖೆ ಯೂ ಸಂಪರ್ಕ ದಲ್ಲಿದೆ ಎಂದು ಹೇಳಿದರು.

ಕೇರಳದಿಂದ ಕರ್ನಾಟಕಕ್ಕೆ ಬರುವ ಪ್ರಯಾಣಿಕರು, ವಿಶೇಷವಾಗಿ ಮಕ್ಕಳ ಬಗ್ಗೆ ನಿಗಾ ಇಡಲು ಈಗಾಗಲೇ ಗಡಿ ಭಾಗದ ಜಿಲ್ಲಾ ವೈದ್ಯಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಷ್ಟೇ ಅಲ್ಲ ಗಡಿ ಭಾಗದ ಐದಾರು ಜಿಲ್ಲೆಗಳಲ್ಲಿರುವ ಮಕ್ಕಳ ಮೇಲೂ ನಿಗಾ ಇಡಲಾಗಿದೆ. ಮಕ್ಕಳಿಗೆ ಜ್ವರ ಅಥವಾ ಚರ್ಮದ ಮೇಲೆ ಗುಳ್ಳೆಗಳು ಕಂಡು ಬಂದರೆ ಸೂಕ್ತ ತಪಾಸಣೆ ಹಾಗೂ ಚಿಕಿತ್ಸೆ ನೀಡುವಂತೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ.

ಟೊಮ್ಯಾಟೋ ಜ್ವರದ ಬಗ್ಗೆ ಸಾಮಾಜಿಕ ಜಾಲ ತಾಣಗಳಲ್ಲಿ ತಪ್ಪು ಮಾಹಿತಿ ಹರಡುತ್ತಿದೆ. ಸಾರ್ವಜನಿಕರು ಇದನ್ನು ನಂಬಬಾರದು ಎಂದು ಕಿವಿಮಾತು ಹೇಳಿದ್ದಾರೆ. ಇಲ್ಲಿ ತನಕ ಕರ್ನಾಟಕದಲ್ಲಿ ಟೊಮ್ಯಾಟೋ ಫ್ಲೂನ ಯಾವುದೇ ಪ್ರಕರಣಗಳು ದಾಖಲಾಗಿಲ್ಲ. ಆದರೆ ಗಡಿಭಾಗದಲ್ಲಿ, 5 ವರ್ಷಕ್ಕಿಂತ ಕೆಳಗಿನ ಮಕ್ಕಳಿಗೆ ಜ್ವರ ಅಥವಾ ಚರ್ಮದ ಮೇಲೆ ಗುಳ್ಳೆಗಳು ಕಾಣಿಸಿದರೆ ತಪಾಸಣೆ ಮಾಡಲು ಸೂಚಿಸಲಾಗಿದೆ ಎಂದು ತಿಳಿಸಿದರು.

# ಸರ್ಕಾರಿ ಕಚೇರಿಯಲ್ಲಿ ಕಾಶ್ಮೀರ ಪಂಡಿತನ ಹತ್ಯೆ

ಶ್ರೀನಗರ, ಮೇ 12 – ಕಾಶ್ಮೀರ ಪಂಡಿತ ಸಮುದಾಯಕ್ಕೆ ಸೇರಿದ ಸರ್ಕಾರಿ ಉದ್ಯೋಗಿಯೊಬ್ಬರನ್ನು ಜಮ್ಮು ಮತ್ತು ಕಾಶ್ಮೀರದ ಬಡ್ಗಂ ಜಿಲ್ಲೆಯ ಚಡೂರಾ ಪ್ರದೇಶದಲ್ಲಿರುವ ಅವರ ಕಚೇರಿಯಲ್ಲಿ ಹತ್ಯೆಗೈಯ್ಯಲಾಗಿದೆ.

ಬಂದೂಕುಧಾರಿಗಳು ಚಡೂರಾ ನಗರದ ತಹಸೀಲ್ ಕಚೇರಿಗೆ ನುಗ್ಗಿ ಅಲ್ಲಿನ ಗುಮಾಸ್ತ ರಾಹುಲ್ ಭಟ್ ಅವರನ್ನು ಹತ್ಯೆ ಮಾಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಬಡ್ಗಂ ಜಿಲ್ಲೆಯ ಶೇಖಪುರ ವಲಸಿಗರ ಕಾಲೋನಿಯಲ್ಲಿ ಭಟ್ ನೆಲೆಸಿದ್ದರು. ಗುಂಡಿನ ದಾಳಿಯ ನಂತರ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗಲಿಲ್ಲ.

# ಅನ್ನಕ್ಕೆ 'ಅನ್ನ'ವೆನ್ನದೆ ಕನ್ನಡ ಉಳಿಯುವುದಿಲ್ಲ

ಮಾನ್ಯರೇ,

'ಕನ್ನಡ ಅನ್ನದ ಭಾಷೆಯಾಗಬೇಕು' ಎಂದು ಎಲ್ಲರೂ ಹೇಳುತ್ತಾರೆ. ಆದರೆ, ಅನ್ನವನ್ನು 'ಅನ್ನ' ಎಂದು ಬಹುತೇಕ ಯಾರೂ ಹೇಳುವುದೇ ಇಲ್ಲ ! ಮನೆಯಲ್ಲೂ 'ರೈಸ್', ಮದುವೆಯಲ್ಲೂ 'ರೈಸ್', ಮಠದಲ್ಲೂ 'ರೈಸ್', ಹೋಟೆಲಲ್ಲೂ 'ರೈಸ್'!

ಕನ್ನಡದ ಅಭಿವೃದ್ಧಿಯು ಪ್ರಾಧಿಕಾರ, ಪರಿಷತ್ತಿನ ಮುಖಾಂತರ ಆಗುವುದಕ್ಕಿಂತ ನಮ್ಮ ನಿಮ್ಮಿಂದಲೇ ಆಗಬೇಕು. ಅನವಶ್ಯಕವಾದ ಪರ ಭಾಷಾ ಶಬ್ದಗಳ ಬಳಕೆ ಆದಷ್ಟು ಕಡಿಮೆ ಮಾಡಿಕೊಂಡರೆ ಮಾತ್ರ ಕನ್ನಡ ಉಳಿಯಲು ಸಾಧ್ಯ.

ಅನಿವಾರ್ಯ, ಅವಶ್ಯವಾದಲ್ಲಿ ಪರಭಾಷಾ ಪದಗಳ ಬಳಕೆ ತಪ್ಪಲ್ಲ. ಆದರೆ, ನಮ್ಮ ಕನ್ನಡದಲ್ಲೇ ಬಳಕೆಯಲ್ಲಿದ್ದ ಪದಗಳು ಈಗೀಗ ಕಡಿಮೆಯಾಗುತ್ತಾ ಕಾಣೆಯಾಗುತ್ತಿರುವುದು ಆತಂಕಕಾರಿ ಅಂಶವಾಗಿದೆ.

ನಾನಂತೂ ಕಾರ್ಯಕ್ರಮಗಳಿಗೆ ಹೋದಾಗ ಬಡಿಸುವವರು 'ರೈಸ್-ರೈಸ್' ಎಂದರೆ ಹಾಕಿಸಿಕೊಳ್ಳುವುದಿಲ್ಲ. 'ಅನ್ನ ಇದ್ದರೆ ಹಾಕಣ್ಣಾ', 'ರೈಸ್' ಬೇಡ ಎನ್ನುತ್ತೇನೆ. ಹಾಗೆ ನೋಡಿದರೆ 'ಅನ್ನ' ಎನ್ನುವುದು ಸಂಸ್ಕೃತ ಪದವೇ ಆದರೂ ಅದು ಶತ ಶತಮಾನಗಳಿಂದ ಕನ್ನಡ ಪದವೇ ಆಗಿದೆ.

ಕೇವಲ ಇದೊಂದೇ ಪದವಲ್ಲ, ಅನೇಕ ಪದಗಳು ನಮ್ಮ ದೈನಂದಿನ ಬಳಕೆಯಲ್ಲಿ ಅನ್ಯ ಭಾಷೀಯ ಪದಗಳೇ ಆಗಿರುತ್ತವೆ. ಈ ಪರಿಪಾಠ ಕಡಿಮೆಯಾದಲ್ಲಿ 'ಕನ್ನಡ ನುಡಿ-ನಡೆ' ಸಾಧ್ಯವಾದಷ್ಟೂ ಶುದ್ಧವಾಗಿರುತ್ತದೆ.

**- ಹೆಚ್.ಬಿ.ಮಂಜುನಾಥ,** ಹಿರಿಯ ಪತ್ರಕರ್ತ

# ಮತಾಂತರ ತಡೆ ಮಸೂದೆ ಜಾರಿಗೆ ನಿರ್ಧಾರ

**(1ನೇ ಪುಟದಿಂದ)** ವಿಧಾನ ಪರಿಷತ್ ಅಧಿವೇಶನದಲ್ಲಿ ಇದಕ್ಕೆ ಅಂಗೀಕಾರ ಪಡೆಯಲಾಗುವುದು. ಅಧಿವೇಶನದಲ್ಲಿರದ ಸಂದರ್ಭದಲ್ಲಿ ಸುಗ್ರೀವಾಜ್ಞೆ ಮಾರ್ಗ ಪಡೆಯಲು ಅವಕಾಶವಿದೆ ಎಂದವರು ಹೇಳಿದ್ದಾರೆ.

ವಿಧಾನ ಸಭೆಯಲ್ಲಿ ಮಸೂದೆ ಕುರಿತು ಚರ್ಚೆ ನಡೆಯುವ ಸಂದರ್ಭದಲ್ಲಿ ಮಾತನಾಡಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ, ಎಂಟು ರಾಜ್ಯಗಳು ಇದೇ ರೀತಿಯ ಕಾಯ್ದೆ ಜಾರಿಗೆ ತಂದಿವೆ. ಕರ್ನಾಟಕ ಒಂಭತ್ತನೇ ರಾಜ್ಯವಾಗಲಿದೆ ಎಂದಿದ್ದರು.

ಈ ಕಾಯ್ದೆಯ ಮೂಲಕ ಕಾನೂನು ಬಾಹಿರ ಮತಾಂತರ ತಡೆಯಲು ಉದ್ದೇಶಿಸಲಾಗಿದೆ. ಬಲವಂತ, ಆಮಿಷ ಇತ್ಯಾದಿ ವಂಚನಾತ್ಮಕ ಮಾರ್ಗಗಳ ಮೂಲಕ ಮತಾಂತರ ತಡೆಯಲು ಮಸೂದೆ ರೂಪಿಸಲಾಗಿದೆ.

ಕಾಯ್ದೆ ಉಲ್ಲಂಘಿಸಿದವರಿಗೆ ಮೂರರಿಂದ ಐದು ವರ್ಷಗಳ ಜೈಲು ಹಾಗೂ 25 ಸಾವಿರ ರೂ.ಗಳವರೆಗಿನ ದಂಡ ವಿಧಿಸಲಾಗುವುದು. ಅಪ್ರಾಪ್ತರು, ಮಹಿಳೆ, ಪರಿಶಿಷ್ಟರ ಬಲವಂತದ ಮತಾಂತರದ ಸಂದರ್ಭದಲ್ಲಿ ಮೂರರಿಂದ ಹತ್ತು ವರ್ಷಗಳವರೆಗಿನ ಜೈಲು ಹಾಗೂ 50 ಸಾವಿರ ರೂ.ಗಳಿಗೂ ಹೆಚ್ಚಿನ ದಂಡಕ್ಕೆ ಅವಕಾಶವಿದೆ.

ಬಲವಂತದ ಮತಾಂತರ ಮಾಡಿದ ವ್ಯಕ್ತಿಯಿಂದ ಐದು ಲಕ್ಷ ರೂ.ಗಳವರೆಗಿನ ಪರಿಹಾರಕ್ಕೂ ಮಸೂದೆಯಲ್ಲಿ ಅವಕಾಶವಿದೆ. ಸಾಮೂಹಿಕ ಮತಾಂತರ ಪ್ರಕರಣಗಳಲ್ಲಿ ಮೂರರಿಂದ ಹತ್ತು ವರ್ಷಗಳವರೆಗೆ ಜೈಲು ಹಾಗೂ ಲಕ್ಷ ರೂ.ಗಳವರೆಗಿನ ದಂಡ ವಿಧಿಸಲಾಗುವುದು.

ಮದುವೆಯ ಏಕೈಕ ಉದ್ದೇಶಕ್ಕಾಗಿ ಮತಾಂತರ ಮಾಡಿದರೆ, ಅಂತಹ ಮದುವೆಯನ್ನು ಕೌಟುಂಬಿಕ ನ್ಯಾಯಾಲಯ ಅಸಿಂಧುಗೊಳಿಸಲು ಅವಕಾಶವಿದೆ. ಬಲವಂತದ ಮತಾಂತರ ಜಾಮೀನು ರಹಿತ ಹಾಗೂ ಸಂಜ್ಞೇಯವಾಗಿದೆ.

ಸರ್ಕಾರ ಸುಗ್ರೀವಾಜ್ಞೆಗೆ ಮುಂದಾಗಿರುವುದನ್ನು ಟೀಕಿಸಿರುವ ಕಾಂಗ್ರೆಸ್ ನಾಯಕ ಯು.ಟಿ. ಖಾದರ್, ಯಾವುದೇ ಚರ್ಚೆ ನಡೆಸದೇ, ಏಕಾಏಕಿ ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಕಾಯ್ದೆಯನ್ನು ಜಾರಿಗೆ ತರುವ ತುರ್ತು ಮತ್ತು ಅನಿವಾರ್ಯತೆ ಸರ್ಕಾರಕ್ಕೆ ಏನಿತ್ತು? ಎಂದು ಪ್ರಶ್ನಿಸಿದ್ದಾರೆ.

ಸಂವಿಧಾನ ವಿರೋಧಿ ಹಾಗೂ ಸರ್ಕಾರದ ಹಿಂಬಾಗಿಲ ಕೃತ್ಯವನ್ನು ರಾಜ್ಯಪಾಲರು ತಿರಸ್ಕರಿಸಬೇಕು. ವಿಧಾನ ಮಂಡಲದ ಗೌರವವನ್ನು ಉಳಿಸಬೇಕೆಂದು ಜನತೆಯ ಪರವಾಗಿ ಮನವಿ ಮಾಡುತ್ತೇನೆ ಎಂದೂ ಅವರು ಹೇಳಿದ್ದಾರೆ.

# ಮಕ್ಕಳಿಗೆ ಶರಣರ ವಚನಗಳನ್ನು ಪರಿಚಯಿಸಿ

### ತರಳಬಾಳು ಶ್ರೀ



ಚನ್ನಗಿರಿ, ಮೇ 12- ಬಸವಾದಿ ಶಿವಶರಣರ ವಚನಗಳನ್ನು ದೇಶ-ವಿದೇಶಗ ಳಲ್ಲಿ ವ್ಯಾಪಕವಾಗಿ ಪ್ರಸಾರ ಮಾಡಬೇಕೆಂಬ ಹಂಬಲ ಹಿರಿಯ ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರದಾಗಿತ್ತು. ಪೂಜ್ಯರ ಕನಸನ್ನು ನನಸಾಗಿಸಲು ಸಮಗ್ರ ವಚನ ಸಾಹಿತ್ಯವನ್ನು ಜಾಲತಾಣದಲ್ಲಿ ಸುಲಭವಾಗಿ ಎಲ್ಲರಿಗೂ ದೊರಕುವಂತೆ ಮಾಡಿದ್ದೇವೆ. ಶರಣರ ವಚನಗಳನ್ನು ಮಕ್ಕಳಿಗೆ ಪರಿಚಯಿಸಿ, ಅವರನ್ನು ಸಂಸ್ಕಾರವಂತರನ್ನಾಗಿಸಿ ಎಂದು ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಇಂದು ಚನ್ನಗಿರಿ ತಾಲ್ಲೂಕಿನ ಸಿದ್ಧನಮಠ ಗ್ರಾಮದಲ್ಲಿ ಏರ್ಪಡಿಸಲಾಗಿದ್ದ ನಾಡಿಗರ ತಿಪ್ಪೇರುದ್ರಪ್ಪನವರ ಕೈಲಾಸ ಶಿವಗಣಾರಾಧನೆ ಮತ್ತು ಸರ್ವಶರಣ ಸಮ್ಮೇಳನದಲ್ಲಿ ಶ್ರೀಗಳು ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು.

ಸಹಜ ಸಾವು ದೇವರ ನಿರ್ಧಾರವಾದರೆ, ಅಸಹಜ ಸಾವು ಮನುಷ್ಯನ ತಪ್ಪುಗಳಿಂದ ಬರುತ್ತದೆ. ದೇವರು ಶರೀರದ ರಕ್ಷಣೆಗೆ ಬೇಕಾದ ಸಂವೇದನೆಯನ್ನು ನೀಡಿದ್ದಾನೆ. ಆ ಸಂವೇದನೆಯ ಮೂಲಕ ರಕ್ಷಣೆ ಮಾಡಿಕೊಳ್ಳುವುದು ಮನುಷ್ಯನ ಜವಾಬ್ದಾರಿ ಆಗಿರುತ್ತದೆ ಎಂದು ಶ್ರೀಗಳು ನುಡಿದರು.

ಸಮ್ಮೇಳನದಲ್ಲಿ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್ ಬಿ ರಂಗನಾಥ್, ವೈದ್ಯ ಡಾ.ಬಸವಂತಪ್ಪ, ಯುವ ಮುಖಂಡ ಮಾಡಾಳು ಮಲ್ಲಿಕಾರ್ಜುನ ಮುಂತಾದವರು ಲಿಂಗೈಕ್ಯ ನಾಡಿಗರ ತಿಪ್ಪೇರುದ್ರಪ್ಪನವರಿಗೆ ನುಡಿ ನಮನ ಅರ್ಪಿಸಿದರು. ಯುಗಧರ್ಮ ರಾಮಣ್ಣ ಲಾವಣಿಗಳನ್ನು ಹಾಡಿದರು. ವೇದಿಕೆಯಲ್ಲಿ ವಡ್ನಾಳ್ ಅಶೋಕ್, ವಿಜ್ಞಾನಿ ಬಸವರಾಜ್ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಶಿಕ್ಷಕ ಸಿದ್ದಪ್ಪ ವಚನ ಗೀತೆಗಳನ್ನು ಹಾಡಿದರು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ನಿರ್ದೇಶಕ ಗಂಗಾಧರಪ್ಪ ಸ್ವಾಗತಿಸಿದರು. ಪ್ರೊ.ಕೆ.ಗುರುಶಾಂತಪ್ಪ ವಂದಿಸಿದರು. ನಾಗರಾಜ ಸಿರಿಗೆರೆ ಕಾರ್ಯಕ್ರಮ ನಿರೂಪಿಸಿದರು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/381/2022-23 ದಿನಾಂಕ: 11.05.2022

**ಸಂಧಾನ ಪ್ರಕಟಣೆ ಸಂಖ್ಯೆ: 02/2022-23**

**(ಬಸ್ ನಿಲ್ದಾಣಗಳ ಹೊರ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ)**

ಕ.ರಾ.ರ.ಸಾ.ನಿಗಮದ, ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಇರುವ, ಹರಿಹರ ಬಸ್ ನಿಲ್ದಾಣದ ಹೊರಭಾಗದಲ್ಲಿ ಯೂನಿಪೋಲ್ಸ್, ಹೋರ್ಡಿಂಗ್ಸ್ ಮತ್ತು ಆರ್ಚ್‌ಗಳು ಖಾಲಿ ಇದ್ದು ಹಾಗೂ ಜಗಳೂರು ಬಸ್ ನಿಲ್ದಾಣದಲ್ಲಿ ಹೋರ್ಡಿಂಗ್ಸ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರ ಭಾಗದ ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ ಮೂಲಕ ಪ್ರಕಟಣೆ ಹೊರಡಿಸಲಾಗಿರುತ್ತದೆ. ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿ: 11.05.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ-577 002ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಅಧಿಕಾರಿ-7760990452, ಸಹಾಯಕ ಸಂಚಾರ ವ್ಯವಸ್ಥಾಪಕರು-7760990461.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ.

ವಾಸಾಸಂಇ/ಉನಿ-ಸಿ.ಪಿ/477/ಎಂಸಿಎ/2022-23



**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ.

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/380/2022-23 ದಿನಾಂಕ: 11-05-2022

ಇ-ಟೆಂಡರ್/ಸಂಧಾನ/ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ ಸಂಖ್ಯೆ: 02/2022-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ **ಮಲೆಬೆನ್ನೂರು ಬಸ್ ನಿಲ್ದಾಣದ ಮಳಿಗೆ ಸಂಖ್ಯೆ.01 ಕ್ಕೆ** (ಶಾಶ್ವತ ಸ್ಥಳ 05 ವರ್ಷ) (ಸಾಮಾನ್ಯ) ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. **ಹರಿಹರ ಬಸ್ ನಿಲ್ದಾಣದ ಉಪಹಾರ ಗೃಹ** (ಶಾಶ್ವತ ಸ್ಥಳ 05 ವರ್ಷ) (ಸಾಮಾನ್ಯ) ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನ ಮೂಲಕ (ಮಾತುಕತೆ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ. **ಹರಿಹರ ಬಸ್ ನಿಲ್ದಾಣದ ನಾಣ್ಯ ಚಾಲಿತ ಮಾನವ ತೂಕದ ಯಂತ್ರ** (ಪರಿಶಿಷ್ಟ ಜಾತಿ) (ತೆರೆದ ಸ್ಥಳ 03 ವರ್ಷ) ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಮ್ಯಾನ್ಯುಯಲ್ ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್: ksrtc.karnataka.gov.in ನಲ್ಲಿ ಮತ್ತು ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://eproc.karnataka.gov.in ನಿಂದ ದಿನಾಂಕ: 11-05-2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ - 577002** ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗೀಯ ಸಂಚಾರ ಅಧಿಕಾರಿ - 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು - 7760990461.**

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ.

ವಾಸಾಸಂಇ/ವಾ.ಪ್ರ/482/ಅಡ್ವರ್ಟೋರ್/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**WANTED**
**TELE CALLER**
(MALE / FEMALE)
Any Qulification
IMMEDIATE JOINING



- Fresher / 2-3 Years Experience
- Excellent communication skills
- Build a Strong relationship with customers

WANTED
**DELIVERY BOYS**

MAHARAJ E-MART (P) LTD. DVG.
CONTACT NO.
9513636501 / 9513636530
www.wewinbazaar.com



**JOB & FRANCHISE OPPORTUNITY**

**G shop Retail Private Limited**
is a retail convience store and we are looking qualified sales candidates to manage sales at our G Shop stores located on across Davanagere city.
If you are interested
Please attend the Briefing session and Interview on Friday
(Date : 13.5.2022) at 10.30 Am

Venue : Pooja Hotel
Contact No
96200 86824, 90712 91672

# ರಾಜ್ಯಸಭೆ ಚುನಾವಣೆಗೆ ಅಧಿಸೂಚನೆ

**ಜೂನ್ 10ರಂದು ರಾಜ್ಯಸಭೆ, ಜೂನ್ 13ರಂದು ವಿಧಾನ ಪರಿಷತ್ತಿಗೆ ಚುನಾವಣೆ**

ಬೆಂಗಳೂರು, ಮೇ 12 - ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಜೂನ್ 10 ರಂದು ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಇದೇ ಸಂದರ್ಭದಲ್ಲಿ ವಿಧಾನ ಪರಿಷತ್ತಿನಿಂದ ತಲಾ ಎರಡು ಶಿಕ್ಷಕ ಹಾಗೂ ಪದವೀಧರ ಕ್ಷೇತ್ರಗಳಿಗೆ ಜುಲೈ 4 ರಂದು ತೆರವಾಗಲಿರುವ ಸ್ಥಾನಗಳಿಗೆ ಜೂನ್ 13 ರಂದು ಚುನಾವಣೆ ನಡೆಯಲಿದೆ.

ಈ ಸಂಬಂಧ ಕೇಂದ್ರ ಚುನಾವಣಾ ಆಯೋಗ ಆದೇಶ ಹೊರಡಿಸಿದ್ದು, ಮೇ 19 ರಿಂದ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭಗೊಂಡು, ಜೂನ್ 15 ರಂದು ಮತ ಎಣಿಕೆ ನಡೆಯಲಿದೆ.

ನಾಮಪತ್ರ ಸಲ್ಲಿಸಲು ಮೇ 26 ರಂದು ಕಡೇ ದಿನವಾಗಿದ್ದು, ನಾಮಪತ್ರ ಹಿಂದಕ್ಕೆ ಪಡೆಯಲು ಮೇ 30 ಕೊನೆಯ ದಿನವಾಗಿದೆ. ಜೂನ್ 13 ರಂದು ಬೆಳಿಗ್ಗೆ 8 ರಿಂದ 4 ಗಂಟೆಯವರೆಗೂ ವಾಯುವ್ಯ, ದಕ್ಷಿಣ ಪದವೀಧರ ಕ್ಷೇತ್ರಗಳಿಗೂ ವಾಯುವ್ಯ ಹಾಗೂ ಪಶ್ಚಿಮ ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ.

ಇದುವರೆಗೂ ನಿರಾಣಿ ಹಣಮಂತಪ್ಪ ರುದ್ರಪ್ಪ, ಕೆ.ಟಿ. ಶ್ರೀಕಂಠೇಗೌಡ, ಅರುಣ್ ಶಹಪೂರ, ಬಸವರಾಜ ಹೊರಟ್ಟಿ ಈ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದರು. ಇವರಿಂದ ತೆರವಾಗುವ ನಾಲ್ಕು ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ.

ವಿಧಾನಸಭೆಯಿಂದ ರಾಜ್ಯಸಭೆಯನ್ನು ಪ್ರತಿನಿಧಿಸುತ್ತಿದ್ದ ಕೆ.ಸಿ. ರಾಮಮೂರ್ತಿ, ಜೈರಾಮ್ ರಮೇಶ್, ಆಸ್ಕರ್ ಫರ್ನಾಂಡೀಸ್, ನಿರ್ಮಲಾ ಸೀತಾರಾಮನ್ ಅವರ ಅವಧಿ ಜೂನ್ 30 ರಂದು ಅಂತ್ಯಗೊಳ್ಳಲಿದೆ.

ಇವರಿಂದ ತೆರವಾಗುವ ಸ್ಥಾನಗಳಿಗೆ ಜೂನ್ 10 ರಂದು ಚುನಾವಣೆ ನಡೆಸಲು ನಿರ್ಧರಿಸಿರುವ ಆಯೋಗ ಮೇ 24 ರಂದು ಅಧಿಸೂಚನೆ ಹೊರ ಬೀಳಲಿದ್ದು, ಅಂದೇ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭಗೊಳ್ಳಲಿದೆ.

ಮೇ 31 ನಾಮಪತ್ರ ಸಲ್ಲಿಕೆಗೆ ಕಡೇ ದಿನವಾಗಿದ್ದು, ನಾಮಪತ್ರ ಹಿಂತೆಗೆಯಲು ಜೂನ್ 3 ಅಂತಿಮ ಗಡುವು ನೀಡಿದೆ. ಅಗತ್ಯ ಕಂಡಲ್ಲಿ ಜೂನ್ 10 ರಂದು ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೂ ಮತದಾನ ನಡೆದು, ಅಂದೇ ಫಲಿತಾಂಶ ಪ್ರಕಟಗೊಳ್ಳಲಿದೆ.

# ಗ್ರಾಮಲೆಕ್ಕಾಧಿಕಾರಿಗಳ ರಾಜ್ಯ ಸಮಾವೇಶ

**ನಗರದಲ್ಲಿ ನಾಳೆ**

ದಾವಣಗೆರೆ, ಮೇ 12- ಕರ್ನಾಟಕ ರಾಜ್ಯ ಗ್ರಾಮ ಲೆಕ್ಕಾಧಿಕಾರಿಗಳ ಕೇಂದ್ರ ಸಂಘದ ವತಿಯಿಂದ ಗ್ರಾಮ ಆಡಳಿತ ಅಧಿಕಾರಿ ಬೇಡಿಕೆ ಘೋಷಣೆಗಾಗಿ ಗ್ರಾಮ ಲೆಕ್ಕಾಧಿಕಾರಿಗಳ ರಾಜ್ಯ ಮಟ್ಟದ ಬೃಹತ್ ಸಮಾವೇಶ ಹಮ್ಮಿಕೊಂಡಿರುವುದಾಗಿ ಸಂಘದ ರಾಜ್ಯಾಧ್ಯಕ್ಷ ಬಿ. ದೊಡ್ಡಬಸಪ್ಪ ರೆಡ್ಡಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಕಾಲೇಜು ಬಳಿಯ ಮೈದಾನದಲ್ಲಿ ನಾಡಿದ್ದು ದಿನಾಂಕ 14ರಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಸಮಾವೇಶವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿಶೇಷ ಆಹ್ವಾನಿತರಾಗಿ ಕಂದಾಯ ಸಚಿವ ಆರ್.ಅಶೋಕ್ ಆಗಮಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಸೇರಿದಂತೆ ಜಿಲ್ಲೆಯ ಶಾಸಕರುಗಳು, ಅಧಿಕಾರಿಗಳು ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ನಾಗೇಶ್, ಖಜಾಂಚಿ ಎ.ಎಂ. ಲೋಹಿತ್, ಪರಸಪ್ಪ ತಳವಾರ್, ಗುರುಮೂರ್ತಯ್ಯ ಇತರರು ಉಪಸ್ಥಿತರಿದ್ದರು.

# ವೈರಸ್ ವಿರುದ್ಧ 'ಶೂನ್ಯ' ಹಠಕ್ಕೆ ಬಿದ್ದ ಚೀನಾ

## ಆರ್ಥಿಕ ಬೆಳವಣಿಗೆ ಕುಸಿದರೂ ನಿಯಂತ್ರಣಕ್ಕೆ ಬರದ ಕೊರೊನಾ

ಬೀಜಿಂಗ್, ಮೇ 12 – ಶಾಂಘೈ ಹಾಗೂ ಇತರೆ ನಗರಗಳಲ್ಲಿ ಹೇರಲಾಗಿರುವ ಕಠಿಣ ನಿರ್ಬಂಧಗಳನ್ನು ತೆರವುಗೊಳಿಸದೆಯೇ ಆರ್ಥಿಕ ಚೇತರಿಕೆ ತರಲು ಚೀನಾ ನಾಯಕರು ಹೆಣಗಾಡುತ್ತಿದ್ದಾರೆ. ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ತಮ್ಮ ಅಧಿಕಾರಾವಧಿಯನ್ನು ವಿಸ್ತರಿಸಲು ಕ್ರಮ ತೆಗೆದುಕೊಳ್ಳುತ್ತಿರುವ ನಡುವೆ ಈ ಸವಾಲು ಎದುರಾಗಿದೆ.



ಆಡಳಿತಾರೂಢ ಕಮ್ಯುನಿಸ್ಟ್ ಪಾರ್ಟಿ ಶೂನ್ಯ ಕೊವಿಡ್ ನೀತಿಯನ್ನು ಘೋಷಿಸಿದೆ. ಇದರ ಪ್ರಕಾರ ಪ್ರತಿಯೊಂದು ಕೊವಿಡ್ ಪಾಸಿಟಿವ್ ಪ್ರಕರಣವನ್ನು ಅತಿ ಹೆಚ್ಚು ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ವಿಶ್ವ ಆರೋಗ್ಯ ಸಂಘಟನೆ ಸೇರಿದಂತೆ, ಹಲವಾರು ಪರಿಣಿತರು ಈ ನೀತಿಯ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಆದರೆ, ಜಿನ್‌ಪಿಂಗ್ ಶೂನ್ಯ ಕೊವಿಡ್ ನೀತಿಗೆ ಬದ್ಧವಾಗಿದ್ದಾರೆ.

ಶೂನ್ಯ ಕೊವಿಡ್ ನೀತಿ ಸುಸ್ಥಿರವಲ್ಲ ಎಂದು ಡಬ್ಲ್ಯೂ.ಹೆಚ್.ಓ. ಪ್ರಧಾನ ನಿರ್ದೇಶಕ ಟೆಡ್ರೊಸ್ ಅಧನೊಮ್ ಗೆಬ್ರಿಯೆಸುಸ್ ಹೇಳಿದ್ದರು.

ಶೂನ್ಯ ಕೊವಿಡ್ ನೀತಿಯಿಂದಾಗಿ ಈ ವರ್ಷದ ಆರಂಭದವರೆಗೂ ಕೊರೊನಾ ಸೋಂಕು ಕಡಿಮೆ ಸಂಖ್ಯೆಯಲ್ಲಿರುವಂತೆ ನೋಡಿಕೊಳ್ಳುವಲ್ಲಿ ಚೀನಾ ಯಶಸ್ವಿಯಾಗಿತ್ತು. ನಂತರ ಕೊರೊನಾ ಪ್ರಕರಣಗಳು ಹೆಚ್ಚಾಗಿದ್ದವು. ಆಗ ಚೀನ ಪರಿವರ್ತಿತ ಶೂನ್ಯ ಕೊವಿಡ್ ನೀತಿಗೆ ಮುಂದಾಯಿತು. ಕೊರೊನಾ ಪಾಸಿಟಿವ್ ಕಂಡು ಬರುವ ಪ್ರದೇಶದ ಸುತ್ತಲಿನ ಪ್ರದೇಶಗಳಲ್ಲಿ ಸೀಲ್‌ಡೌನ್ ಮಾಡಲಾಗುತ್ತಿದೆ. ಇಷ್ಟಾದರೂ, ಒಮಿಕ್ರಾನ್ ವ್ಯಾಪಕವಾಗಿ ಹರಡುತ್ತಿದೆ. ಇದರಿಂದಾಗಿ ಶಾಂಘೈನ 2.5 ಕೋಟಿ ಜನರ ಪೈಕಿ ಬಹುತೇಕರು ಮನೆಯೊಳಗೆ ಉಳಿಯುವಂತಾಗಿದೆ.

ಬೀಜಿಂಗ್ ಸೇರಿದಂತೆ ಹಲವು ಪ್ರಮುಖ ನಗರಗಳಲ್ಲಿ ಕೋಟಿಗಟ್ಟಲೆ ಜನರು ಸೀಲ್‌ಡೌನ್‌ನಲ್ಲಿದ್ದಾರೆ.

ಇದರಿಂದಾಗಿ ಚೀನಾದಲ್ಲಿ ಕೈಗಾರಿಕಾ ಉತ್ಪನ್ನ ಕುಸಿತವಾಗಿ ವಿಶ್ವದಾದ್ಯಂತ ಸರಕುಗಳ ಪೂರೈಕೆಗೆ ತೊಂದರೆಯಾಗುತ್ತಿದೆ. ಸ್ಮಾರ್ಟ್‌ಫೋನ್‌ನಿಂದ ಹಿಡಿದು ಕಬ್ಬಿಣದ ಅದಿರಿನವರೆಗೆ ಸಮಸ್ಯೆಯಾಗುತ್ತಿದೆ. ಅಮೆರಿಕ, ಯುರೋಪ್ ಸೇರಿದಂತೆ ಹಲವು ದೇಶಗಳಲ್ಲಿ ಆಮದು ದುಬಾರಿಯಾಗುತ್ತಿದೆ.

ಲಾಕ್‌ಡೌನ್ ಕಾರಣದಿಂದಾಗಿ ಉಂಟಾಗಿರುವ ಉದ್ಯೋಗ ಹಾಗೂ ಆಸ್ತಿ ನಷ್ಟ ನಿರ್ವಹಿಸಲು ಟ್ಯಾಕ್ಸ್ ರೀಫಂಡ್ ಹಾಗೂ ಇತರೆ ನೆರವು ನೀಡುವುದಾಗಿ ಚೀನಾ ತಿಳಿಸಿದೆ. ಉದ್ಯೋಗ ಪರಿಸ್ಥಿತಿ ಸಂಕೀರ್ಣ ಹಾಗೂ ಗಂಭೀರವಾಗಿದೆ ಎಂದು ಚೀನಾ ಪ್ರಧಾನ ಮಂತ್ರಿ ಲಿ ಕೆಕಿಯಾಂಗ್ ಕಳೆದ ವಾರ ಹೇಳಿದ್ದರು.

ಉದ್ಯೋಗ ನಷ್ಟ ತಡೆಯುವ ಸಲುವಾಗಿ ವೆಚ್ಚ ಹೆಚ್ಚಿಸಲು ಹಾಗೂ ಸಾಲ ನೀತಿಗಳನ್ನು ರೂಪಿಸಲು ಅಧಿಕಾರಿಗಳಿಗೆ ಲಿ ಸೂಚನೆ ನೀಡಿದ್ದಾರೆ ಎಂದು ಅಲ್ಲಿನ ಅಧಿಕೃತ ಮಾಧ್ಯಮಗಳು ವರದಿ ಮಾಡಿವೆ.

ಇಷ್ಟಾದರೂ ಸಹ ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಚತುರ್ಥದಲ್ಲಿ ಆರ್ಥಿಕ ಬೆಳವಣಿಗೆ ದರ ಶೇ.1.8ರಷ್ಟಿರಲಿದೆ ಎಂದು ಅಂದಾಜಿಸಲಾಗುತ್ತಿದೆ. ಕಳೆದ ಚತುರ್ಥದಲ್ಲಿ ಶೇ.4.8ರ ಬೆಳವಣಿಗೆಯಾಗಿತ್ತು. ಇಡೀ ವರ್ಷದ ಬೆಳವಣಿಗೆ ದರ ಶೇ.3.8ರಷ್ಟಿರುವ ಅಂದಾಜಿದೆ. ಆಡಳಿತಾರೂಢ ಪಕ್ಷ ಶೇ.5.5ರ ಗುರಿ ಹೊಂದಿದೆ.

ಶೂನ್ಯ ಕೊವಿಡ್ ನೀತಿಗಾಗಿ ಚೀನಾ ಅಲ್ಪಾವಧಿಯ ವ್ಯಾಪಾರ ಹಾಗೂ ದೀರ್ಘಾವಧಿಯ ಆರ್ಥಿಕ ಬೆಳವಣಿಗೆ ತ್ಯಾಗ ಮಾಡಲು ಸಿದ್ಧವಾಗಿದೆ ಎಂದು ನೊಮುರಾ ಆರ್ಥಿಕ ಪರಿಣಿತ ಟಿಂಗ್ ಲು ಹೇಳಿದ್ದಾರೆ. ಇಷ್ಟಾದರೂ ಒಮಿಕ್ರಾನ್ ವೇಗವಾಗಿ ಹರಡುವ ಕಾರಣ ಅದರ ನಿಯಂತ್ರಣ ಕಠಿಣವಾಗಿದೆ.

ಚೀನಾದ ನೀತಿ ವಾಸ್ತವಿಕವಾಗಿದೆ ಎಂದು ಆ ದೇಶದ ವಿದೇಶಾಂಗ ಸಚಿವಾಲಯದ ವಕ್ತಾರರು ಬುಧವಾರ ಹೇಳಿದ್ದಾರೆ.

ಚೀನಾ ಶೂನ್ಯ ಸೋಂಕು ನೀತಿ ಅನುಸರಿಸುತ್ತಿಲ್ಲ. ಸೋಂಕು ಪರಿಸ್ಥಿತಿಯನ್ನು ಅತ್ಯಲ್ಪ ಅವಧಿಯಲ್ಲಿ, ಅತಿ ಕಡಿಮೆ ಸಾಮಾಜಿಕ ವೆಚ್ಚದಲ್ಲಿ ನಿರ್ವಹಿಸುವುದು ನಮ್ಮ ಗುರಿ ಎಂದು ವಕ್ತಾರ ಝೂವೋ ಲಿಜಿಯಾನ್ ಹೇಳಿದ್ದಾರೆ.

ಆಹಾರ ಕೊರತೆ ಹಾಗೂ ಇತರೆ ಕಠಿಣ ಪರಿಸ್ಥಿತಿಗಳ ಕುರಿತು ಶಾಂಘೈ ಹಾಗೂ ಇತರೆ ನಗರಗಳ ಜನ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಹಾಕುತ್ತಿದ್ದಾರೆ. ಇವುಗಳನ್ನು ಪೊಲೀಸರು ತಕ್ಷಣವೇ ಸೆನ್ಸಾರ್ ಮಾಡಿ ಕಿತ್ತು ಹಾಕುತ್ತಿದ್ದಾರೆ.

ಬರುವ ಅಕ್ಟೋಬರ್ ಇಲ್ಲವೇ ನವೆಂಬರ್‌ನಲ್ಲಿ ಕ್ಸಿ ಜಿನ್‌ಪಿಂಗ್ ಮೂರನೇ ಅವಧಿಗೆ ಅಧ್ಯಕ್ಷರಾಗಿ ಸ್ವಯಂ ನೇಮಕಗೊಳ್ಳಲಿದ್ದಾರೆ.

ಶೂನ್ಯ ಕೊವಿಡ್ ಆರ್ಥಿಕ ನೀತಿ ಬದಲಾವಣೆಗೆ ದಾರಿ?

ಶೂನ್ಯ ಕೊವಿಡ್ ನೀತಿಯಿಂದ ಆಗಿರುವ ಆರ್ಥಿಕ ಪರಿಣಾಮ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೊಂದಿರುವ ಬಿಗಿ ಹಿಡಿತದ ಮೇಲೆ ಪ್ರಭಾವ ಬೀರಲಿದೆಯೇ? ಎಂಬ ಪ್ರಶ್ನೆ ಉದ್ಭವಿಸಿದೆ.

ಆರ್ಥಿಕ ಸುಧಾರಣೆ ಬಯಸುವ ಹಾಗೂ ಸರ್ಕಾರಿ ಉದ್ಯಮಗಳ ಪರವಾದ ನೀತಿ ಬದಲಿಸುವ ಪರ ಇರುವವರು ತಮ್ಮ ವಾದ ಮುಂದಿಡಲು ಕೊರೊನಾ ಬಿಕ್ಕಟ್ಟು ಅವಕಾಶ ನೀಡಬಹುದು ಎನ್ನಲಾಗುತ್ತಿದೆ.

ಔದ್ಯಮಿಕ ವಲಯದ ಜೊತೆ ನಿಕಟ ಸಂಪರ್ಕ ಹೊಂದಿರುವವರಿಗೆ ಇದೊಂದು ಅವಕಾಶ ನೀಡಬಹುದು ಎಂದು ಎನೊಡೊ ಎಕನಾಮಿಕ್ಸ್‌ನ ಡಯಾನಾ ಚೊಯ್ಲೆವ ಹೇಳಿದ್ದಾರೆ.

ಕಳೆದ ವರ್ಷ ಚೀನಾದ 44 ಲಕ್ಷ ಕಂಪನಿಗಳು ಮುಚ್ಚಿದ್ದವು. ಕೇವಲ 13 ಲಕ್ಷ ಉದ್ಯಮಗಳು ಹೊಸದಾಗಿ ಆರಂಭವಾಗಿದ್ದವು. 2019ರಲ್ಲಿ 1.38 ಕೋಟಿ ಉದ್ಯಮಗಳು ಆರಂಭವಾಗಿದ್ದವು ಎಂದು ಚೊಯ್ಲೆವ ಹೇಳಿದ್ದಾರೆ.

ಕೊರೊನಾ ನಿರ್ಬಂಧಗಳಿಂದಾಗಿ ಚೀನಾದ ಹಲವಾರು ಪ್ರಾಂತ್ಯಗಳಲ್ಲಿನ ಆಟೊಮೊಬೈಲ್, ಎಲೆಕ್ಟ್ರಾನಿಕ್ ಮತ್ತಿತರೆ ಉದ್ಯಮಗಳು ಮುಚ್ಚಿವೆ. ಶಾಂಘೈನ ಬಹುತೇಕ ಉದ್ಯಮಗಳು ಮಾರ್ಚ್ ಅಂತ್ಯದಿಂದ ಮುಚ್ಚಿವೆ. ಇಲ್ಲಿನ ಬಂದರು ಉದ್ಯಮ ಶೇ.30ರಷ್ಟು ಕುಸಿತ ಕಂಡಿದೆ.

# ಶಿಬಿರಗಳು ವ್ಯಕ್ತಿತ್ವ ಅರಳಿಸುವ ತರಬೇತಿ ತಾಣಗಳು

ಮಲೇಬೆನ್ನೂರು, ಮೇ 12 - ಗ್ರಾಮದ ಜಿಗಳಿ ರಸ್ತೆಯಲ್ಲಿರುವ ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ಆವರಣದಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿದ್ದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವು ನಿನ್ನೆ ನಡೆಯಿತು.



ವಿದ್ಯಾಸಂಸ್ಥೆಯ ಪ್ರಾಂಶುಪಾಲರಾದ ಶ್ರೀಮತಿ ಸುಜಾತ ಶಿವಾನಂದಪ್ಪ ಮಾತನಾಡಿ, ರಜಾ ಅವಧಿಯಲ್ಲಿ ಮಕ್ಕಳಿಗಾಗಿ ಆಯೋಜಿಸಲಾಗುವ ಶಿಬಿರಗಳು ಮಕ್ಕಳ ವ್ಯಕ್ತಿತ್ವ ಅರಳಿಸುವ ತರಬೇತಿ ತಾಣಗಳಿದ್ದಂತೆ. ರಜಾ ಅವಧಿಯನ್ನೂ ಸಹ ಕಲಿಕೆಗೆ ಬಳಸಿಕೊಂಡಿರುವ ಈ ಶಿಬಿರದ ಮಕ್ಕಳು ವಿಭಿನ್ನ ವ್ಯಕ್ತಿತ್ವದ ಪ್ರತೀಕವಾಗಿದ್ದಾರೆ ಎಂದು ಹೇಳಿದರು.

ಮಕ್ಕಳ ಹೊಸ ಕಲಿಕೆಗೆ ಪ್ರೋತ್ಸಾಹಿಸಿ ಅವರನ್ನು ಉತ್ತೇಜಿಸಿ ಶಿಬಿರಕ್ಕೆ ಸೇರಿಸುವ ಮೂಲಕ ಅವರಲ್ಲಿ ಉತ್ತಮ ಸಂಸ್ಕಾರ ಬಿತ್ತನೆಗೆ ಕಾರಣ ರಾದ ಪೋಷಕರು ಅಭಿನಂದನಾರ್ಹರು ಎಂದು ಶ್ಲಾಘಿಸಿದರು.

ಶಿಬಿರದಲ್ಲಿ ಪಾಲ್ಗೊಂಡಿದ್ದ ಮಕ್ಕಳು, ತಾವು ಕಲಿತ ವಿಷಯಗಳ ಕುರಿತು ಅನಿಸಿಕೆ ಹಂಚಿಕೊಂಡರು. ಪೇಪರ್ ಕ್ರಾಫ್ಟ್, ವಿವಿಧ ಅಭಿನಯ ಗೀತೆ, ಕಿರು ನಾಟಕ ಇತ್ಯಾದಿ ಪ್ರದರ್ಶಿಸಿದರು.

ಶ್ರೀಮತಿ ಸುಜಾತ ಶಿವಾನಂದಪ್ಪ ಅವರು ಶಿಬಿರಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಿ ಶುಭ ಹಾರೈಕೆಯೊಂದಿಗೆ ಬೀಳ್ಕೊಟ್ಟರು.

ಮುಖ್ಯ ಶಿಕ್ಷಕರಾದ ಶಶಿಧರ್ ವೇದಿಕೆಯಲ್ಲಿದ್ದರು. ಶಿಕ್ಷಕಿ ಶ್ರೀಮತಿ ಕವಿತಾ ಸ್ವಾಗತಿಸಿದರು. ಪ್ರತಿಭಾ ನಿರೂಪಿಸಿದರು.

# ನಗರದಲ್ಲಿ ಇಂದು ರೆಡ್‌ಕ್ರಾಸ್‌ನಿಂದ ಉಚಿತ ಲಸಿಕಾ ಶಿಬಿರ

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ದಾವಣಗೆರೆ ಜಿಲ್ಲಾ ಶಾಖೆಯ ವತಿಯಿಂದ ನಗರದ ರೆಡ್‌ಕ್ರಾಸ್ ಭವನದಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ (ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್) ಉಚಿತ ಕೊರೊನಾ ಲಸಿಕಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. 60 ವರ್ಷ ಮೇಲ್ಪಟ್ಟವರಿಗೆ ಮೊದಲ, ಎರಡನೇ ಹಾಗೂ ಬೂಸ್ಟರ್ ಡೋಸ್ ಲಸಿಕೆ ಹಾಕಲಾಗುವುದು. ಪ್ರತಿ ಶುಕ್ರವಾರ ಕೂಡ ಈ ಶಿಬಿರ ಇರುತ್ತದೆ.

# ನಲ್ಕುದುರೆ : ಇಂದಿನಿಂದ ಆಂಜನೇಯ, ವಿಘ್ನೇಶ್ವರ ದೇವಸ್ಥಾನಗಳ ಉದ್ಘಾಟನೆ

ಚನ್ನಗಿರಿ ತಾಲ್ಲೂಕಿನ ನಲ್ಕುದುರೆ ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿ ಮತ್ತು ಶ್ರೀ ವಿಘ್ನೇಶ್ವರ ಸ್ವಾಮಿ ದೇವಸ್ಥಾನಗಳ ಹಾಗೂ ಶ್ರೀ ವೀರಭದ್ರೇಶ್ವರ ಸಾರ್ವಜನಿಕ ಸಮುದಾಯ ಭವನದ ಉದ್ಘಾಟನಾ ಸಮಾರಂಭವು ಇಂದಿನಿಂದ ಮೂರು ದಿನ ನಡೆಯಲಿದೆ.

ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಉದ್ಘಾಟನಾ ಸಮಾರಂಭ ಇಂದು ಜರುಗಲಿದ್ದು, ರಾತ್ರಿ 8.50ಕ್ಕೆ ಸ್ವಾಮಿಯ ಪ್ರತಿಷ್ಠಾಪನೆ ನಂತರ ಹೋಮ, ಮಂಗಳಾರತಿ ಇರಲಿದೆ. ನಾಳೆ ಶನಿವಾರ ಬೆಳಿಗ್ಗೆ 7ರಿಂದ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮತ್ತು ಗೋಪುರದ ಕಳಸಾರೋಹಣ, ಕುಂಭಾಭಿಷೇಕ ಹಾಗೂ ಹೋಮದ ಪೂರ್ಣಾಹುತಿ ಮತ್ತು ಮಹಾಮಂಗಳಾರತಿ ನಡೆಯಲಿದೆ.

ಬೆಳಿಗ್ಗೆ 10.30 ಕ್ಕೆ ನಡೆಯುವ ಧರ್ಮಸಭೆಯಲ್ಲಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಪಾಂಡೋಮಟ್ಟಿ ವಿರಕ್ತ ಮಠದ ಡಾ. ಶ್ರೀ ಗುರುಬಸವ ಸ್ವಾಮೀಜಿ, ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.

ನಾಡಿದ್ದು ಭಾನುವಾರ ಬೆಳಿಗ್ಗೆ ಶ್ರೀ ವಿಘ್ನೇಶ್ವರ ಸ್ವಾಮಿಯ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ ಮತ್ತು ಕುಂಭಾಭಿಷೇಕ ಸಮಾರಂಭವು ಬೆಳಿಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ನೆರವೇರಲಿದೆ. ಭದ್ರಾವತಿಯ ಶ್ರೀ ಶೀಲ ಸಂಪಾದನ ಮಠದ ಡಾ. ಸಿದ್ಧಲಿಂಗ ಸ್ವಾಮೀಜಿ ಪ್ರತಿಷ್ಠಾಪನೆ ನೆರವೇರಿಸಲಿದ್ದಾರೆ.

ಭದ್ರಾವತಿಯ ಶ್ರೀ ಸದ್ಗುರು ಸಿದ್ಧಾರೂಢ ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ ಕಳಸಾರೋಹಣ ನೆರವೇರಿಸುವರು. ಶ್ರೀ ವಿಘ್ನೇಶ್ವರ ದೇವಸ್ಥಾನದ ನಾಮಫಲಕವನ್ನು ಶಿವಮೊಗ್ಗ ವಿಧಾನಪರಿಷತ್ ಸದಸ್ಯ ಎಸ್. ರುದ್ರೇಗೌಡ ಉದ್ಘಾಟಿಸಲಿದ್ದಾರೆ.

ಅಂದು ಬೆಳಿಗ್ಗೆ 10.30 ಕ್ಕೆ ನಡೆಯುವ ಶ್ರೀ ವೀರಭದ್ರೇಶ್ವರ ಸಾರ್ವಜನಿಕ ಸಮುದಾಯ ಭವನದ ಉದ್ಘಾಟನೆ ಮತ್ತು ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಲ್ಕುದುರೆ ಗ್ರಾ.ಪಂ. ಅಧ್ಯಕ್ಷ ಎನ್. ಹೆಚ್. ಪ್ರಾಣೇಶ್ ವಹಿಸಿಕೊಳ್ಳಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ ಸಭಾ ಭವನ ಉದ್ಘಾಟಿಸಲಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ ಭೋಜನಾಲಯ, ಮಾಯಕೊಂಡ ಶಾಸಕ ಪ್ರೊ. ಎನ್. ಲಿಂಗಣ್ಣ ಅಡುಗೆಮನೆ, ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ದಾನಿಗಳ ನಾಮಫಲಕವನ್ನು ಹಾಗೂ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ರಾಜ್ಯಸಭಾ ಸದಸ್ಯ ಎಸ್. ರುದ್ರೇಗೌಡ, ವಿಪ ಸದಸ್ಯ ಅರುಣ್ ಡಿ.ಎಸ್. ಕೊಠಡಿಗಳನ್ನು ಉದ್ಘಾಟಿಸಲಿದ್ದಾರೆ.

ಅತಿಥಿಗಳಾಗಿ ಮಾಜಿ ಶಾಸಕ ಎಂ. ಬಸವರಾಜನಾಯ್ಕ್, ಬಯಲುಸೀಮೆ ಅಭಿವೃದ್ಧಿ ನಿಗಮ ಮಂಡಳಿ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಮಾಜಿ ಶಾಸಕ ಕೆ. ಶಿವಮೂರ್ತಿ ನಾಯ್ಕ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಶ್ರೀ ವೀರಭದ್ರೇಶ್ವರ ಸಾರ್ವಜನಿಕ ಸಮುದಾಯ ಭವನದ ಗೌರವ ಕಾರ್ಯದರ್ಶಿ ಹೆಚ್.ವಿ. ಸಿದ್ದಪ್ಪ ಅವರನ್ನು ಸನ್ಮಾನಿಸಲಾಗುವುದು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
27ನೇ ವರ್ಷದ
**ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ**
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ರಾಯಪ್ಪ ರಡ್ಡಿ ಸುರೇಶ್ ಇವರ ವಿವಾಹ ವಾರ್ಷಿಕೋತ್ಸವ ಸೇವಾರ್ಥ.

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಸುಸಜ್ಜಿತವಾದ ವಾಣಿಜ್ಯ ಮಳಿಗೆ 1ನೇ ಮಹಡಿ ಬ್ಯಾಂಕ್ ಹಾಗೂ ಎಲ್ಲಾ ರೀತಿಯ ವ್ಯಾಪಾರಗಳಿಗೆ, ಶೋ ರೂಂಗೆ ಯೋಗ್ಯವಾದ 4503 ಅಡಿಗಳು ಹಾಗೂ 3250 ಅಡಿಗಳುಳ್ಳ ಸೆಲ್ಲರ್ ಬಾಡಿಗೆಗೆ ಇದೆ. ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.
84959 91223, 96205 95579

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ.**
SSLC/PUC ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು, ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ & ಡೆಲಿವರಿ ಬಾಯ್ಸ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಮಾಡುವ ಸಮಯ ಸಂಜೆ:6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**WANTED**
B.Com, BA and PUC candidates for Office Work. Pls send resume+photo.
S. R. Associates
# 831, 6th Cross, Sri. Nijalingappa Badavane, Davangere.
Mob : 96118-66449

**ಡ್ರೈವರ್‌ಗಳು ಬೇಕಾಗಿದ್ದಾರೆ**
ಪ್ರತಿಷ್ಠಿತ ಶಾಲೆಗೆ ಅನುಭವವುಳ್ಳ ಡ್ರೈವರ್‌ಗಳು ಬೇಕಾಗಿದ್ದಾರೆ.
Ph : 98444 33059

**ಬೇಕಾಗಿದ್ದಾರೆ**
ಮೆಡ್ ಕ್ಯೂರ್ ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಅನುಭವವಿರುವ ಹುಡುಗರು ಬೇಕಾಗಿದ್ದಾರೆ. ವಯಸ್ಸು 18 ರಿಂದ 30, ಜಯನಗರ, SSI ಆಸ್ಪತ್ರೆ ರೋಡ್, ದಾವಣಗೆರೆ.
ಫೋ. : 78999 91860

**ಬೇಕಾಗಿದ್ದಾರೆ**
ನಮ್ಮ Account Section ಗೆ PUCಯಲ್ಲಿ ಕಾಮರ್ಸ್ ತೆಗೆದುಕೊಂಡು ಟ್ಯಾಲಿ ಆದ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ನೋಬಲ್ ಟಾರ್ಪಾಲಿನ್ಸ್**
ದಾವಣಗೆರೆ.
ಅಡಿಕೆ ಮತ್ತು ತೆಂಗಿನ ಫಸಲನ್ನು ಇಲಿ ಮತ್ತು ಅಳಿಲಿನಿಂದ ರಕ್ಷಿಸಲು ಬೇಕಾದ ಫೈಬರ್ ಶೀಟ್ ಸಿಗುತ್ತದೆ. ವಿಚಾರಿಸಿ.
7625078183

**ಬೇಕಾಗಿದ್ದಾರೆ**
ಅಕೌಂಟೆಂಟ್, ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ.
ಮೊ: 94838 62779

**WANTED LADY TEACHERS**
B.Ed - 3 Posts, D.ED - 3 Posts.
NTC or Any Degree - 3 Posts
Contact : Vidya Vikas Convent
Behind Aarykae Hospital,
K.T.J Nagar, Davanagere.
M : 99866 17235

**ಮೆಡಿಕಲ್ ಶಾಪ್ ಕೊಡುವುದಿದೆ**
ಒಳ್ಳೆಯ ಲೊಕೇಷನ್‌ನಲ್ಲಿರುವ ಉತ್ತಮ ವ್ಯಾಪಾರವಿರುವ 3 ಜನ ಡಾಕ್ಟರ್ಸ್ ಕೂರಲು ಸ್ಥಳಾವಕಾಶ ಇರುವಂತಹ ಮೆಡಿಕಲ್ ಶಾಪ್ ಕೊಡುವುದಿದೆ
ಸಂಪರ್ಕಿಸಿ : 70192 49897

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಹದಡಿ ರಸ್ತೆಯಲ್ಲಿನ ಉದಯ ಸೂಪರ್ ಬಜಾರ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಮಹಿಳಾ ಕ್ಯಾಷಿಯರ್ ಬೇಕಾಗಿದ್ದಾರೆ.
ಸಂಪರ್ಕಿಸಿ:
96110 16817

**Experienced**
SALESMAN required for ready made BRANDED showroom.
Ph :98867 57688

**Work from home**
ಮನೆಯಲ್ಲಿ ಕುಳಿತು ಕೆಲಸ ನೋ ಟಾರ್ಗೆಟ್ ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ ವಾರಕ್ಕೆ ಗಳಿಸಿ 3,500 ರಿಂದ 5,000 (ಕೊರಿಯರ್ ಸೌಲಭ್ಯವಿದೆ)
97432 17566, 91084 18233

**ಮನೆ ಮಾರಾಟಕ್ಕಿದೆ**
ದಾವಣಗೆರೆ ನಗರದ ಎಸ್. ನಿಜಲಿಂಗಪ್ಪ ಬಡಾವಣೆ, 1ನೇ ಕ್ರಾಸ್, ನ್ಯಾಷನಲ್ ಕಾನ್ವೆಂಟ್ ಹತ್ತಿರ, 30x40 ಅಳತೆಯುಳ್ಳ ಡ್ಯೂಪ್ಲೆಕ್ಸ್, ಸುಸಜ್ಜಿತವಾದ, ವಾಸ್ತುವುಳ್ಳ, ಪೂರ್ವ/ಉತ್ತರ ದಿಕ್ಕಿನ ಕಾರ್ನರ್ ಮನೆ ಮಾರಾಟಕ್ಕಿದೆ.
ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ
94487 27266, 94481 34340

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ : 10,000/-
08192 261003
95352 43598, 99161 43003

**ಬೇಕಾಗಿದ್ದಾರೆ**
BA B.Ed, B.Sc B.Ed ಹಾಗೂ ಯಾವುದೇ ಡಿಗ್ರಿ ಪಡೆದವರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಶಾಲೆ
ಹೊಸ ಆರ್.ಟಿ.ಓ ಕಛೇರಿ ಹಿಂಭಾಗ, 6ನೇ ಕ್ರಾಸ್, ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ.
Mob : 99640 17729

**JOB VACANCY**
DATA PROCESSING / LEAD GENERATION
QUALIFICATION: Any Degree
SKILLS: Computer Basics (MS Word/ Excel, Browsing, Email Handling)
TIMINGS: Mon-Fri 6.30pm to 4 am (Sat/Sun will be Holiday)
LOCATION: Vidyanagara, Davanagere
CONTACT: E-MARK TECHNOLOGIES,
Ph.: 73491 29212, 99647 93273

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಫ್ಯಾಕ್ಟರಿಗೆ ಕೆಲಸ ಮಾಡಲು ಹೆಲ್ಪರ್ ಹುಡುಗರು ಬೇಕಾಗಿದ್ದಾರೆ. 8 ತಾಸು ಡ್ಯೂಟಿ. ESI & PF ಸೌಲಭ್ಯವಿದೆ.
96113 94063, 88678 53961

**ಮನೆಗಳು ಮಾರಾಟಕ್ಕಿವೆ**
ದಾವಣಗೆರೆ ನಗರದ ಎಂ.ಸಿ.ಸಿ. 'ಎ' ಬ್ಲಾಕ್, ನೀರಿನ ಟ್ಯಾಂಕ್ ಎದುರಿಗೆ ಇರತಕ್ಕ ಮನೆ ಹಾಗೂ ಎಸ್.ಎಸ್.ಲೇ ಔಟ್, ಅಥಣಿ ಕಾಲೇಜು ಎದುರಿಗೆ ಇರತಕ್ಕ ವಾಸದ ಮನೆಗಳು ಮಾರಾಟಕ್ಕಿವೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
Honnurswamy Vanjre
87926 04196

**WANTED**
In Davanagere
Swiggy Delivery Boys
(Part Time\Full Time)
Weekly Salary : 5000 / 6000
CALL : 95382 00008

**WANTED TEACHERS**
M.Com., BE., M.Tech, BCA., BSc., PCM/Nursing, Diploma & B.E.,
ಸಿಂಚನ ಅಕಾಡೆಮಿ, ದಾವಣಗೆರೆ.
85532 78258, 90195 80600

**ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್ ನಲ್ಲಿ ಕೆಲಸ ಮಾಡಲು Marketing Executive ಬೇಕಾಗಿದ್ದಾರೆ. Site Visit, Engineer Meet etc 25-30 ವರ್ಷದೊಳಗಿನವರು ಸಂಪರ್ಕಿಸಿ:
74063 96332, 74067 40635

**ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ**
94487 51313

**ಮನೆಗಳು ಬಾಡಿಗೆಗೆ ಇವೆ**
#142, 5ನೇ ಕ್ರಾಸ್ 'ಸಿ' ಬ್ಲಾಕ್ ದೇವರಾಜ ಅರಸ್ ಬಡಾವಣೆ ಇದರ ಮೊದಲನೆ ಮಹಡಿ ಹಾಗೂ 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಮ್‌ನ ಮನೆಗಳು ಖಾಲಿ ಇವೆ.
ಬಾಡಿಗೆಗೆ ವಿಚಾರಿಸಿ :
Ph : 94488 97446

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ನಗರದಲ್ಲಿ ಕೆಲಸ ನಿರ್ವಹಿಸಲು ಅನುಭವವಿರುವ ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ವೇತನ, ESI & PF ಸೌಲಭ್ಯವಿದೆ.
SRV Associates
97401 09695, 73539 50027

**ಭಟ್ಟರು ಬೇಕಾಗಿದ್ದಾರೆ**
ಡಾಬಾ ಹೋಟೆಲ್‌ನಲ್ಲಿ ವೆಜ್& ನಾನ್ ವೆಜ್ ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ.
ಸಂಬಳ - 18000/- ರಿಂದ 24000/- ಸಂಪರ್ಕಿಸಿ :
ಫೋ. : 99022 49393

**ಶಿಕ್ಷಕಿಯರು ಬೇಕಾಗಿದ್ದಾರೆ**
BA B.Ed, D.Ed, B.Sc, B.Sc B.Ed, MA. ವೇತನ : 8000 ರಿಂದ 10,000/-
Address : Little Champs Gurukulam
Near, HKR Circle, College Road, Nittuvalli, Davanagere.
90609 06039, 98443 32559

**TEACHERS WANTED**
B.A. BSc., BEd., DEd., & NTC
Contact : Akshara EHPs T.C. Layout Davangere for more Details
Contact : 97311 00216, 98442 56380

**BASIC+DTP+ FAST TYPING+ KANNADA**
Only 1000/-Rs
80734 64103

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಹೆಸರು ಬದಲಾವಣೆ**
ಎ.ಎಂ. ನಾಗಭೂಷಣಸ್ವಾಮಿ ಎಂಬ ನಾನು ವಾಸ # 2329, ಶ್ರೀ ಸಾಯಿ ಸದನ, ಎಂಸಿಸಿ ಎ ಬ್ಲಾಕ್, ದಾಣಗೆರೆ ಸಿಟಿ ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, ನನ್ನ ಹೆಸರು ಎಲ್ಲಾ ಮೂಲ ದಾಖಲಾತಿಗಳಲ್ಲಿ ಎ.ಎಂ. ರಾಜು ಎಂದು ನಮೂದಾಗಿರುತ್ತದೆ. ಈ ಹೆಸರು ಫಲಿಕೆ ಆಗದೆ ಇರುವ ಕಾರಣ ದಿನಾಂಕ : 10.05.2022 ರಂದು ನೋಟರಿಯವರ ಸಮ್ಮುಖದಲ್ಲಿ ಎ.ಎಂ. ನಾಗಭೂಷಣಸ್ವಾಮಿ ಎಂದು ಬದಲಾಯಿಸಿಕೊಂಡಿರುತ್ತೇನೆ.

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ, ತೆಂಗು, ಮಾವು, ಸಪೋಟ, ಶ್ರೀಗಂಧ, ಬೆಟ್ಟದ ನೆಲ್ಲಿ, ಹೆಬ್ಬೇವು, ಮಹಾ ಘನಿ, ನಿಂಬೆ, ದಾಳಿಂಬೆ, ಗುಲಾಬಿ ಹಾಗೂ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ, ದೊರೆಯುತ್ತದೆ, ಸಂಪರ್ಕಿಸಿರಿ.
ಫೋ. : 94484 39639

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**NEET K-CET CRASH COURSE**
Class Timing 10am to 4-30pm
From 11-05-2022
SAMRUDDHI ACADEMY
DAVANGERE
6364640296

**ಮಳಿಗೆಗಳು ಬಾಡಿಗೆಗೆ ಇವೆ**
ಬ್ಯಾಂಕ್, ಕ್ಲಿನಿಕ್, ಡಾಬಾ, ಹೋಟೆಲ್ ಮತ್ತು ಇತರೆಗಳಿಗೆ ಯೋಗ್ಯವಾದ ಮಳಿಗೆಗಳು ಬಾಡಿಗೆಗೆ ಇವೆ.
ಗ್ರೌಂಡ್ ಫ್ಲೋರ್ 17x58
ಫಸ್ಟ್ ಫ್ಲೋರ್ 22x58
ಈ ಅಡಿ ಅಳತೆಯ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. ಸ್ಥಳ : ಹಳೆ ಪಿ.ಬಿ ರಸ್ತೆ, ಪಿಡಬ್ಲ್ಯೂಡಿ ಆಫೀಸ್ ಎದುರು, ಹರಿಹರ.
ಸಂಪರ್ಕಿಸಿ :
99013 55240, 87224 80268

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**Commercial / Resident Site ಮಾರಾಟಕ್ಕಿದೆ**
ಪಿ.ಬಿ ರೋಡ್‌ಗೆ ಲಗಾತ್ತಾಗಿರುವ ಉತ್ತರ ದಿಕ್ಕಿನ ಸೈಟ್ ಮಾರಾಟಕ್ಕಿದೆ. ಅಳತೆ : 47x70., 60 ಅಡಿ Bit of Land ಸಿಗುತ್ತವೆ. ಪಿ.ಬಿ. ರೋಡ್ ಅವರಗೆರೆ Hyundai Car ShowRoom ಪಕ್ಕದ ಸೈಟು ಸುತ್ತಲೂ ನಾಲ್ಕು ಕಡೆ ಕಾಂಪೌಂಡ್ ಹಾಕಿರುತ್ತದೆ. Contact :
91643 82998, 90082 27199

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 90080 67049

**WANTED**
Accountant, Network Engineer, In Premise/Field Technician, Sales Manager/ Executives, HR, Computer and Office Job. Software Tester and Developer
98444 92888

**New Commercial Building For Rent**
3 Floor Commercial Building at Chowkipete (Beside Gowdara Jayadevappa Cloth Shop) each floor 1000 sq.ft Total 3000 sq.ft. (3 floors)
98441 41049, 98440 64712

**WANTED TEACHERS**
Head Master - 1,
Nursery Tr - 2,
BA / B.Sc / B.Com, /D.Ed / B.Ed -5
Contact
Immediately with Originals
99801 48289 / 98807 43838

**WORK FROM HOME**
Male/Female, Full / Part time Hand writing work. Small Letter to Capital Letter Earn Per month 12,000/- to 15,000/-
89718 52431

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿ, ದಾವಣಗೆರೆ 30x40 ದಕ್ಷಿಣ ದಿಕ್ಕಿನ ಎರಡು ಸೈಟುಗಳು ಮಾರಾಟಕ್ಕಿವೆ. ಫಲಾನುಭವಿಗಳಿಂದ ನೇರ ಮಾರಾಟ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
63605 67975

**We Are Hiring Teachers**
NTT/D.Ed/B.Ed minimum 2 Years & good communicatio skill in Kannada, English, Hindi. Contact :
Edu Planet International School
Opp, Swimming pool, MCC `B' Block, Dvg.
76761 81417, 70199 32983

**ಜಾಗ ಬಾಡಿಗೆಗೆ ಇದೆ**
20x100 ಅಳತೆಯ 15 HP Power Supply ಇರುವ ಜಾಗ ಕೈಗಾರಿಕಾ ಉಪಯೋಗಕ್ಕೆ ಬಾಡಿಗೆಗೆ ಇದೆ. ಪಿ.ಬಿ. ರೋಡ್, ಹುಂಡೈ ಶೋರೂಂ ಪಕ್ಕ ಆವರಗೆರೆ, ಪೂನಾ-ಬೆಂಗಳೂರು ರೋಡ್.
72045 77823

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಕೆಲಸಕ್ಕೆ ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ (ಅನುಭವವುಳ್ಳವರು ಹಾಗೂ ಸ್ಥಳೀಯರಿಗೆ ಮೊದಲ ಆದ್ಯತೆ)
ಫೋ. : 77602 68105

# ಜ್ಞಾನವ್ಯಾಪಿ ಮಸೀದಿ ವಿಡಿಯೋ ಸಮೀಕ್ಷೆ

## ಅಡ್ವೊಕೇಟ್ ಕಮೀಷನರ್ ಬದಲಿಸಲು ನ್ಯಾಯಾಲಯ ನಕಾರ

ವಾರಣಾಸಿ, ಮೇ 12 - ಗ್ಯಾನವ್ಯಾಪಿ ಶೃಂಗಾರ ಗೌರಿ ಸಂಕೀರ್ಣದ ವಿಡಿಯೋ ಸಮೀಕ್ಷೆಗಾಗಿ ನೇಮಿಸಿರುವ ಸಮೀಕ್ಷೆ ಆಯುಕ್ತರನ್ನು ಬದಲಿಸಲು ನಿರಾಕರಿಸಿರುವ ಸ್ಥಳೀಯ ನ್ಯಾಯಾಲಯ, ಮೇ 17ರ ಒಳಗೆ ಸಮೀಕ್ಷೆ ಪೂರ್ಣಗೊಳಿಸಲು ತಿಳಿಸಿದೆ.

ಆಯುಕ್ತರು ಮಸೀದಿಯಲ್ಲಿ ಸಮೀಕ್ಷೆ ನಡೆಸಲು ನೆರವಾಗುವ ಸಲುವಾಗಿ ಇನ್ನಿಬ್ಬರು ವಕೀಲರನ್ನೂ ನೇಮಿಸಲಾಗಿದೆ. ಕಾಶಿ ವಿಶ್ವನಾಥ ದೇವಾಲಯ ಸಮೀಪದಲ್ಲೇ ಜ್ಞಾನವ್ಯಾಪಿ ಮಸೀದಿ ಇದೆ. ಶೃಂಗಾರ ಗೌರಿ ಸಂಕೀರ್ಣದ ಸಮೀಕ್ಷೆಗಾಗಿ, ಮಸೀದಿಯ ಒಳಗೂ ವಿಡಿಯೋ ಚಿತ್ರೀಕರಣ ನಡೆಸಬೇಕಿದೆ. ಈ ಪ್ರಕ್ರಿಯೆಗೆ ಯಾರಾರೂ ಅಡ್ಡಿ ಪಡಿಸಿದರೆ ಎಫ್.ಐ.ಆರ್. ದಾಖಲಿಸುವಂತೆಯೂ ತಿಳಿಸಲಾಗಿದೆ.

ಮಸೀದಿಯ ಹೊರ ಗೋಡೆಯಲ್ಲಿರುವ ಹಿಂದೂ ದೇವರುಗಳ ನಿತ್ಯ ಆರಾಧನೆಗೆ ಅನುಮತಿ ನೀಡುವಂತೆ ಮಹಿಳೆಯರ ಗುಂಪೊಂದು ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದೆ.

ಮಸೀದಿಯ ಒಳಗೆ ವಿಡಿಯೋ ಸಮೀಕ್ಷೆ ನಡೆಸುವುದನ್ನು ಮಸೀದಿಯ ಆಡಳಿತ ಸಮಿತಿ ವಿರೋಧಿಸಿತ್ತು. ನ್ಯಾಯಾಲಯ ನೇಮಿಸಿರುವ ಆಯುಕ್ತರು ಪಕ್ಷಪಾತಿ ಎಂದೂ ದೂರಲಾಗಿತ್ತು. ಇದರಿಂದಾಗಿ ವಿಡಿಯೋ ಸಮೀಕ್ಷೆಯನ್ನು ಸ್ವಲ್ಪ ಕಾಲ ತಡೆಯಲಾಗಿತ್ತು.

ಮಸೀದಿಯ ಎರಡು ತಳಮಹಡಿಗಳಿಗೆ ಹೋಗುವ ಮಾರ್ಗಕ್ಕೆ ಬೀಗ ಹಾಕಲಾಗಿದೆ ಎಂದು ಮಸೀದಿಯ ಆಡಳಿತ ಮಂಡಳಿ ಹೇಳಿತ್ತು. ಬೀಗದ ಕೀಲಿಗಳು ದೊರಕದೇ ಹೋದರೆ ಅವುಗಳನ್ನು ಮುರಿದು ಸಮೀಕ್ಷೆ ನಡೆಸುವಂತೆ ನ್ಯಾಯಾಲಯ ತಿಳಿಸಿದೆ.

ಬೆಳಿಗ್ಗೆ 8 ರಿಂದ ಮಧ್ಯಾಹ್ನ 12 ರವರೆಗೆ ಪ್ರತಿದಿನ ಜ್ಞಾನವ್ಯಾಪಿ ಶೃಂಗಾರ ಗೌರಿ ಸಂಕೀರ್ಣದಲ್ಲಿ ಸಮೀಕ್ಷೆ ನಡೆಸಿ, ವರದಿ ಸಲ್ಲಿಸುವಂತೆ ನ್ಯಾಯಾಲಯ ಹೇಳಿದೆ.

ಮಸೀದಿಯ ಹೊರ ಭಾಗದಲ್ಲಿರುವ ಶೃಂಗಾರ ಗೌರಿ, ಗಣೇಶ ದೇವರು, ಹನುಮಂತ ಹಾಗೂ ನಂದಿ ವಿಗ್ರಹಗಳಿಗೆ ಪೂಜೆ ಮಾಡಲು ಅನುಮತಿ ನೀಡಬೇಕು. ಈ ಮೂರ್ತಿಗಳಿಗೆ ಯಾವುದೇ ಹಾನಿಯಾಗದಂತೆ ತಡೆಯಬೇಕು ಎಂದು ಅರ್ಜಿದಾರರು ಕೋರಿದ್ದರು.

## ಗ್ರಾಮದೇವತೆ ಹಬ್ಬ : ಕಮಲಾಪುರದಲ್ಲಿ ಇಂದು ನಾಟಕ ಪ್ರದರ್ಶನ

ಹರಿಹರ ತಾಲ್ಲೂಕಿನ ಕಮಲಾಪುರ ಗ್ರಾಮದೇವತೆಯ ಹಬ್ಬದ ಅಂಗವಾಗಿ ಇಂದು ದಿನವಿಡಿ ಶ್ರೀ ಚೌಡೇಶ್ವರಿ ದೇವಿಗೆ ಮಾಂಗಲ್ಯ, ಮೂಗುತಿ ಉಡಿ ತುಂಬುವ ಕಾರ್ಯ ನಡೆಯಲಿದ್ದು, ರಾತ್ರಿ 10.30 ಕ್ಕೆ ಶ್ರೀ ಬಸವೇಶ್ವರ ನಾಟ್ಯ ಕಲಾ ಸಂಘದಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ 'ತವರು ಮನೆ ಕುಂಕುಮ' ಅರ್ಥಾತ್ 'ದೈವ ಸಂಕಲ್ಪ ಗೆದ್ದವರಾರು' ನಾಟಕ ಪ್ರದರ್ಶನಗೊಳ್ಳಲಿದೆ.

# ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ




## ತನಿಖೆಗೆ ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ ಜಿಲ್ಲಾ ಸಮಿತಿ ಪ್ರತಿಭಟನೆ

ದಾವಣಗೆರೆ, ಮೇ 12- ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು, ಅಕ್ರಮದ ಸೂಕ್ತ ತನಿಖೆ ಹಾಗೂ ಶಿಕ್ಷೆ ಖಾತ್ರಿಪಡಿಸಬೇಕೆಂದು ಆಗ್ರಹಿಸಿ, ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ ಜಿಲ್ಲಾ ಸಮಿತಿಯಿಂದ ನಗರದ ಜಯದೇವ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಅಕ್ರಮದಲ್ಲಿ ಭಾಗಿಯಾಗಿದ್ದರು ಎನ್ನಲಾದ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರನ್ನು (ಮೌಲ್ಯಮಾಪನ) ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ. ಪರೀಕ್ಷೆಗೆ ಸಿದ್ಧಪಡಿಸಿದ್ದ ಭೂಗೋಳಶಾಸ್ತ್ರ ವಿಷಯದ 18 ಪ್ರಶ್ನೆಗಳು ಸೋರಿಕೆ ಆಗಿದ್ದವು. ಈಗ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಹಾಗೂ ಇಂಗ್ಲಿಷ್ ಪ್ರಶ್ನೆ ಪತ್ರಿಕೆಗಳೂ ಸೋರಿಕೆಯಾಗಿವೆ ಎಂಬ ಅನುಮಾನ ವ್ಯಕ್ತವಾಗಿದೆ. ಶೈಕ್ಷಣಿಕ ರಂಗದಲ್ಲಿ ಹಾಗೂ ನೇಮಕಾತಿ ವಿಚಾರದಲ್ಲಿ ಈ ರೀತಿಯ ಅಕ್ರಮಗಳು ನಡೆಯುತ್ತಿರುವುದು ಅತ್ಯಂತ ವಿಷಾದನೀಯ ಎಂದು ಎಐಡಿಎಸ್‌ಓ ರಾಜ್ಯಾಧ್ಯಕ್ಷರಾದ ಕೆ.ಎಸ್. ಅಶ್ವಿನಿ ಖಂಡಿಸಿದರು.

ಉಪನ್ಯಾಸಕರಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ವೃತ್ತಿಗೆ ಭ್ರಷ್ಟಾಚಾರದ ಮೂಲಕ ನೇಮಕಾತಿ ಪಡೆದವರಿಂದ ಉತ್ತಮ ಬೋಧನೆ ನಿರೀಕ್ಷಿಸಲು ಸಾಧ್ಯವಿಲ್ಲ. ಅಲ್ಲದೇ ಇಂತಹವರು ವಿದ್ಯಾರ್ಥಿಗಳ ವ್ಯಕ್ತಿತ್ವ, ಯೋಚನೆ ಹಾಗೂ ಜ್ಞಾನವನ್ನು ಬೆಳೆಸುವುದಿಲ್ಲ ಮತ್ತು ನೈತಿಕತೆ ಬಿತ್ತಲ್ಲ. ಶೈಕ್ಷಣಿಕ ಜವಾಬ್ದಾರಿ ಹೊಂದಿರುವವರೇ ಇಂತಹ ಅಕ್ರಮಗಳಿಗೆ ಪುಷ್ಟಿ ನೀಡಿದರೆ ಇನ್ನು ಶಿಕ್ಷಣವನ್ನು ಉಳಿಸುವುದು ಹೇಗೆ ಎಂಬ ಆತಂಕ ಮೂಡುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಪ್ರಕರಣದಲ್ಲಿ ಭಾಗಿಯಾಗಿದ್ದವರನ್ನು ಬಂಧಿಸಿ, ಜೈಲಿಗೆ ಹಾಕಿರುವುದಷ್ಟಕ್ಕೆ ಕೊನೆಯಾಗಬಾರದು. ಕಾನೂನಾತ್ಮಕ ಶಿಕ್ಷೆ ಆಗಬೇಕು. ಈ ಅಕ್ರಮದ ಕುರಿತು ಸರಿಯಾದ ತನಿಖೆ ನಡೆಸಿ, ಭಾಗಿಯಾಗಿರುವ ಎಲ್ಲರನ್ನೂ ಬಂಧಿಸಿ, ಸೂಕ್ತ ಶಿಕ್ಷೆ ನೀಡಬೇಕು ಎಂದು ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿ. ಕಾವ್ಯ, ಟಿ. ಎಸ್. ಸುಮನ್, ಅಭಿಷೇಕ್, ಜಿ. ಪುಷ್ಪ, ಅನುಪ್ರಜ್ಞ ಸೇರಿದಂತೆ ಇತರರು ಭಾಗವಹಿಸಿದ್ದರು.

# ಅಧಿಕಾರಕ್ಕೆ ಬರುವುದು ಸೂರ್ಯ, ಚಂದ್ರ ಇರುವಷ್ಟೇ ಸತ್ಯ

**(1ನೇ ಪುಟದಿಂದ)** ಮಾರ್ಗದಲ್ಲಿ ಮತ್ತು ಅವರು ಕೊಟ್ಟಂತಹ ಅಭಿವೃದ್ಧಿ ಕಾರ್ಯಗಳ ಮೇಲೆ ಮತ್ತೊಮ್ಮೆ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಮಾಡಲಿದೆ ಎಂದು ವಿಜಯೇಂದ್ರ ಹೇಳಿದರು.

ಮಾಜಿ ಶಾಸಕ ಬಿ.ಪಿ.ಹರೀಶ್ ಅವರಿಗೆ ಕಳೆದ ಬಾರಿ ಹಿನ್ನಡೆ ಆಗಿರಬಹುದು. ಅವರು ಶಾಸಕ ರಾಗಿದ್ದ ಸಮಯದಲ್ಲಿ ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗಾಗಿ ನೂರಾರು ಕೋಟಿ ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡಿಸಿದ್ದಾರೆ. ಮತ್ತೆ ಅವರನ್ನು ಗೆಲ್ಲಿಸಬೇಕಾದರೆ ಎಲ್ಲರೂ ಉತ್ತಮವಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಮಾಜಿ ಶಾಸಕ ಬಿ.ಪಿ. ಹರೀಶ್ ಹಿಂದೆ ರಾಜ್ಯದಲ್ಲಿ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಹರಿಹರ ಕ್ಷೇತ್ರಕ್ಕೆ ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಮತ್ತೊಮ್ಮೆ ಈ ಸಮಯದಲ್ಲಿ ಅವರು ಶಾಸಕರಾಗಿದ್ದರೆ ಸಾವಿರಾರು ಕೋಟಿ ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡುತ್ತಿದ್ದರು. ಆದರೆ, ಅವರ ಸೋಲಿನಿಂದ ಕ್ಷೇತ್ರದ ಅಭಿವೃದ್ಧಿ ಕೆಲಸಕ್ಕೆ ಹಿನ್ನಡೆಯಾಗಿದೆ. ಮುಂಬರುವ ಚುನಾವಣೆಯಲ್ಲಿ ಕಾರ್ಯಕರ್ತರು ಅವರಿಗೆ ಹಣದ ನೆರವು ನೀಡಿ ಮತ್ತೊಮ್ಮೆ ಕ್ಷೇತ್ರದ ಶಾಸಕರನ್ನಾಗಿ ಗೆಲ್ಲಿಸಿ ವಿಧಾನಸಭೆ ಕಳಿಸಬೇಕು ಎಂದು ಹೇಳಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ನನ್ನ ರಾಜಕೀಯ ಜೀವನದಲ್ಲಿ 6 ಬಾರಿ ಸೋತು 1 ಬಾರಿ ಶಾಸಕನಾಗಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸವನ್ನು ಮಾಡಿದ್ದೇನೆ. ನಾನು 88 ರ ದಶಕದಲ್ಲಿ ಚಕ್ರದ ಚಿಹ್ನೆಯ ಅಡಿಯಲ್ಲಿ ಸ್ಪರ್ಧೆ ಮಾಡಿದ್ದೆ. ಆದರೆ, ಆ ಸಮಯದಲ್ಲಿ ಪಕ್ಷವನ್ನು ವಿಸರ್ಜನೆ ಮಾಡಲಾಯಿತು. ಆದರೆ, ನಾನು ಪಕ್ಷೇತರರಾಗಿ ಮಾಜಿ ಸಚಿವ ನಾಗಪ್ಪನವರ ವಿರುದ್ಧ ಅಲ್ಪ ಮತಗಳ ಅಂತರದಿಂದ ಪರಾಭವಗೊಂಡೆ ಎಂದು ಹೇಳಿದರು.

ನಂತರದಲ್ಲಿ ಬಿಜೆಪಿಯಲ್ಲಿ ದಾವಣಗೆರೆ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ ಮಾಡುವುದಾಗಿ ಹೇಳಿದರು. ಆದರೆ, ಇಲ್ಲಿನ ರಾಘಣ್ಣ, ನೀಲಗುಂದ ವೀರಣ್ಣ ಇವರು ಹರಿಹರ ಕ್ಷೇತ್ರದ ತಾಲ್ಲೂಕು ಅಧ್ಯಕ್ಷರನ್ನಾಗಿ ಮಾಡಿ ಹರಿಹರದಲ್ಲಿ ರಾಜಕೀಯ ಮಾಡುವಂತೆ ಹೇಳಿದರು. ಕಳೆದ ಬಾರಿ ಕೂಡ ನನಗೆ ದಾವಣಗೆರೆ ನಗರದಲ್ಲಿ ಸ್ಪರ್ಧೆ ಮಾಡುವಂತೆ ತಿಳಿಸಿದರು. ನಾನು ಒಪ್ಪಲಿಲ್ಲ ಎಂದು ಹೇಳಿದರು.

ಹರಿಹರ ಕ್ಷೇತ್ರದಲ್ಲಿ 10 ವರ್ಷ ಅಭಿವೃದ್ಧಿ ಕುಂಠಿತವಾಗಿದೆ. ರಸ್ತೆಗಳು ದುರಸ್ತಿ ಆಗಿರುವುದಿಲ್ಲ. ಕ್ಷೇತ್ರದಲ್ಲಿ ಡಿಸೆಂಬರ್ ತಿಂಗಳಲ್ಲಿ ಚುನಾವಣೆ ನಡೆಯಬಹುದು. ಆದರೆ, ನಾಳೆಯೇ ಚುನಾವಣೆ ನಡೆದರೂ ಸಹ ಅದಕ್ಕೆ ಪಕ್ಷದ ಕಾರ್ಯಕರ್ತರು ಸಿದ್ದರಾಗಿ ಪಕ್ಷವನ್ನು ಗೆಲ್ಲಿಸಲು ಮುಂದಾಗಬೇಕಾಗಿದೆ. ಈಗಾಗಲೇ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷವನ್ನು ತೊರೆದು ಬಿಜೆಪಿ ಪಕ್ಷಕ್ಕೆ ಆಗಮಿಸುವವರ ಸಂಖ್ಯೆ ದೊಡ್ಡದಾಗಿ ಇರುವುದರಿಂದ ಮುಂಬರುವ ಚುನಾವಣೆಯಲ್ಲಿ ನಾನು ಗೆಲ್ಲಬಹುದು ಎಂಬ ವಿಶ್ವಾಸ ಹೊಂದಿರುವುದಾಗಿ ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ಎಸ್.ಎಂ.ವೀರೇಶ್ ಮಾತನಾಡಿ, ತಾಲ್ಲೂಕಿನಲ್ಲಿ ಹಲವಾರು ವರ್ಷಗಳಿಂದ ಜಾತಿ ಜನಾಂಗದ ಲೆಕ್ಕಾಚಾರದಲ್ಲಿ ರಾಜಕೀಯ ನಡೆಯುತ್ತಿದೆ. ಇದನ್ನು ತೊಲಗಿಸಲು ಬಿಜೆಪಿ ಪಕ್ಷವು ಮುಂದಾಗಿದೆ. ಬೂತ್ ಮಟ್ಟದಲ್ಲಿ ಪಕ್ಷವನ್ನು ಸಂಘಟನೆ ಮಾಡುತ್ತಿದ್ದು, ಪಕ್ಷವು ಸದೃಢ ಹೆಜ್ಜೆಯನ್ನು ಹಾಕುತ್ತಾ ಸಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಕ್ಷದ ಹಿರಿಯ ಮುಖಂಡ ಎನ್. ಜಿ.ನಾಗನಗೌಡ್ರು ವಹಿಸಿದ್ದರು.

### ಗೆಲ್ಲಿಸುವವರೆಗೂ ಆತ್ಮವಿಶ್ವಾಸ ಇರಲಿ

ಮಾಜಿ ಶಾಸಕ ಬಿ.ಪಿ. ಹರೀಶ್ ಹುಟ್ಟು ಹಬ್ಬವನ್ನು ಸಡಗರ ಸಂಭ್ರಮದಿಂದ ಅದ್ಧೂರಿಯಾಗಿ ಮೆರವಣಿಗೆ ಮಾಡಿ ಆಚರಣೆ ಮಾಡಿದ್ದು, ಸಂತಸದ ವಿಷಯ. ಆದರೆ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳಲ್ಲಿ ಈ ರೀತಿಯ ಆತ್ಮವಿಶ್ವಾಸ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮತದಾನವಾಗಿ ಗೆಲ್ಲಿಸುವವರೆಗೂ ಇರಬೇಕು ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

### ಆಕಾಂಕ್ಷಿಗಳು ಆಕ್ಷೇಪಣೆ ಮಾಡಲಿಲ್ಲ

ಕ್ಷೇತ್ರದಲ್ಲಿ ಬಿಜೆಪಿ ಪಕ್ಷದಲ್ಲಿ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷಿತರು ಎಂದು ಹೇಳುವ ಜಿಲ್ಲಾ ಬಿಜೆಪಿ ಪಕ್ಷದ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಕುಣೆಬೆಳಕೆರೆ ದೇವೇಂದ್ರಪ್ಪ ಸೇರಿದಂತೆ, ಇತರರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಶಾಸಕ ಎಂ.ಪಿ. ರೇಣುಕಾಚಾರ್ಯ ಮಾತನಾಡುತ್ತಾ, ಹರೀಶ್ ಅವರು ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಲಿ ಎಂದಿದ್ದಕ್ಕೆ ಯಾರು ಆಕ್ಷೇಪಣೆ ಮಾಡದೆ ಇದ್ದದ್ದು ಕಂಡು ಬಂತು.

### ಬಿಜೆಪಿಗೆ ಸೇರ್ಪಡೆ


ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ನಾಗರಾಜ್ ಭಂಡಾರಿ, ಪಿಎಲ್‌ಡಿ. ಬ್ಯಾಂಕ್ ಚಂದ್ರಪ್ಪ ಗುತ್ತೂರು ಸೇರಿದಂತೆ ಹಲವರು ಈ ಸಮಯದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷವನ್ನು ತೊರೆದು ಬಿಜೆಪಿಗೆ ಸೇರಿದರು.

ಬಿಜೆಪಿ ಮಾಜಿ ಅಧ್ಯಕ್ಷ ಹಲಸಬಾಳು ಶಿವಾನಂದಪ್ಪ, ನಾಗನಗೌಡ ಕೆ.ಎನ್. ಹಳ್ಳಿ, ಬಾತಿ ಚಂದ್ರಶೇಖರ್, ರಾಜು ರೋಖಡೆ, ಐರಣಿ ನಾಗರಾಜ್ ಸೇರಿದಂತೆ ಇತರರನ್ನು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಎಂ.ಎಲ್.ಸಿ. ನವೀನ್ ಕುಮಾರ್, ದೂಡಾ ಅಧ್ಯಕ್ಷ ಸುರೇಶ್, ಜೀವನಮೂರ್ತಿ, ಮುಖಂಡರಾದ ದೇವೇಂದ್ರಪ್ಪ ಕುಣೆಬೆಳಕೆರೆ, ತಾ.ಪಂ. ಮಾಜಿ ಅಧ್ಯಕ್ಷ ಅಣ್ಣಪ್ಪ ಐರಣಿ, ಶ್ರೀದೇವಿ ಮಂಜಪ್ಪ, ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ಹನುಮಂತಪ್ಪ, ಪಿ.ಎಲ್.ಡಿ. ಬ್ಯಾಂಕ್ ಚಂದ್ರಪ್ಪ, ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಗ್ರಾಮೀಣ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ, ಹಲಸಬಾಳು ಶಿವಾನಂದಪ್ಪ, ಮಿಠಾಯಿ ಅರುಣ್ ಕುಮಾರ್, ಕೆಂಚನಹಳ್ಳಿ ಮಹಾಂತೇಶ್, ಬೆಳ್ಳೂಡಿ ಬಕ್ಕೇಶ್, ಅಶೋಕ ಕುಂಬಳೂರು, ಕಲ್ಲೇಶ್ ಬೆಳ್ಳೂಡಿ, ರಾಘವೇಂದ್ರ, ಹಾಲೇಶಪ್ಪ ಸಿರಿಗೆರೆ, ಲೋಕಿಕೆರೆ ನಾಗರಾಜ್, ಬಾತಿ ಚಂದ್ರಶೇಖರ್, ಬೆಳ್ಳೂಡಿ ರಾಮಚಂದ್ರಪ್ಪ, ಅಮರಾವತಿ ನಾಗರಾಜ್, ಹೆಚ್. ಮಂಜಾನಾಯ್ಕ್, ತುಳಜಪ್ಪ ಭೂತೆ, ರಾಜು ರೋಖಡೆ, ರವಿ ರಾಯ್ಕರ್, ರೂಪಾ ಕಾಟ್ವೆ, ಸುಮತಿ ಜಯ್ಯಪ್ಪ, ಇಂದ್ರಾಣಿ ಶಿಂಧೆ, ಸಿರಿಗೆರೆ ಕುಮಾರ್, ಹನಗವಾಡಿ ಗಂಗಾಧರ್, ಸಂತೋಷ್ ಗುಡಿಮನೆ ಮತ್ತಿತರರು ಹಾಜರಿದ್ದರು.

# ಲಂಕಾ ಪ್ರಧಾನಿಯಾಗಿ ವಿಕ್ರಮಸಿಂಘೆ

## ಏಕೈಕ ಸದಸ್ಯನಿರುವ ಪಕ್ಷಕ್ಕೆ ಅಧಿಕಾರದ ಚುಕ್ಕಾಣಿ



ಕೊಲಂಬೊ, ಮೇ 12 – ಪ್ರತಿಪಕ್ಷದ ನಾಯಕ ಹಾಗೂ ಮಾಜಿ ಪ್ರಧಾನ ಮಂತ್ರಿ ರಾಣಿಲ್ ವಿಕ್ರಮಸಿಂಘೆ ಅವರನ್ನು ಶ್ರೀಲಂಕಾದ ನೂತನ ಪ್ರಧಾನ ಮಂತ್ರಿಯಾಗಿ ನೇಮಿಸಲಾಗಿದೆ. ತೀವ್ರ ಪ್ರತಿಭಟನೆಗಳ ನಡುವೆ ಮಹಿಂದ ರಾಜಪಕ್ಷೆ ರಾಜೀನಾಮೆ ನೀಡಿದ್ದರಿಂದ ಈ ಸ್ಥಾನ ತೆರವಾಗಿತ್ತು.

ಯುನೈಟೆಡ್ ನ್ಯಾಷನಲ್ ಪಾರ್ಟಿಯ (ಯು.ಎನ್.ಪಿ.) ವಿಕ್ರಮಸಿಂಘೆ ಅವರಿಗೆ ಅಧ್ಯಕ್ಷ ಗೊಟಬಯ ರಾಜಪಕ್ಷೆ ಪ್ರಮಾಣ ವಚನ ಬೋಧಿಸಿದ್ದಾರೆ.

ವಿಕ್ರಮಸಿಂಘೆ ಅವರ ಯು.ಎನ್.ಪಿ. ಪಕ್ಷ ದೇಶದ ಅತ್ಯಂತ ಹಳೆಯ ಪಕ್ಷವಾಗಿದೆ. ಆದರೆ, 2020ರ ಚುನಾವಣೆಯಲ್ಲಿ ಪಕ್ಷ ಒಂದು ಸ್ಥಾನವನ್ನೂ ಪಡೆದಿರಲಿಲ್ಲ. ರಾಷ್ಟ್ರವ್ಯಾಪಿ ಪಡೆದ ಮತಗಳ ಆಧಾರದ ಮೇಲೆ ವಿಕ್ರಮಸಿಂಘೆ ಅವರು ಶಾಸನಸಭೆಗೆ ನೇಮಕಗೊಂಡಿದ್ದರು.

ಆಡಳಿತಾರೂಢ ಎಸ್.ಎಲ್.ಪಿ.ಪಿ. ಪಕ್ಷ ಹಾಗೂ ಪ್ರತಿಪಕ್ಷವಾದ ಎಸ್.ಜೆ.ಬಿ.ಯ ಒಂದು ವರ್ಗ ವಿಕ್ರಮಸಿಂಘೆ ಅವರಿಗೆ ಬೆಂಬಲ ವ್ಯಕ್ತಪಡಿಸಿವೆ. ಆದರೆ, ಪ್ರತಿಪಕ್ಷದ ಹಲವಾರು ಬಣಗಳು ನೇಮಕಕ್ಕೆ ಆಕ್ಷೇಪ ಹೊಂದಿವೆ.

## ಉಚ್ಚಂಗಿದುರ್ಗದ ದೇವಸ್ಥಾನಕ್ಕೆ ಚಂದ್ರಪ್ಪ ಸಹೋದರರಿಂದ ಅತಿಥಿ ಗೃಹ



ದಾವಣಗೆರೆ, ಮೇ 12- ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗದ ಶ್ರೀ ಉತ್ಸವಾಂಬ ದೇವಸ್ಥಾನದ ಆವರಣದಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ನಗರದ ತರಕಾರಿ ವ್ಯಾಪಾರಿಯೂ ಆಗಿರುವ ನಗರಸಭೆ ಮಾಜಿ ಉಪಾಧ್ಯಕ್ಷ ಎಸ್.ಎನ್. ಚಂದ್ರಪ್ಪ ಅವರು ಅತಿಥಿ ಗೃಹವೊಂದನ್ನು ನಿರ್ಮಿಸಿದ್ದಾರೆ.

ಶ್ರೀಮತಿ ಹೊನ್ನಮ್ಮ ಎಸ್. ನಾಗಪ್ಪ ಅವರ ಹೆಸರಿನಲ್ಲಿ ಈ ಅತಿಥಿ ಗೃಹವನ್ನು ನಿರ್ಮಿಸಿ ದೇವಸ್ಥಾನದ ಟ್ರಸ್ಟಿಗೆ ವಹಿಸಲಾಗಿದೆ ಎಂದು ಎಸ್. ಎನ್. ಚಂದ್ರಪ್ಪ ತಿಳಿಸಿದ್ದಾರೆ. ನೂತನ ಅತಿಥಿ ಗೃಹದ ಉದ್ಘಾಟನೆ ನಿನ್ನೆ ನೆರವೇರಿತು. ಈ ಸಂದರ್ಭದಲ್ಲಿ ಎಸ್.ಎನ್. ತಿಪ್ಪೇಸ್ವಾಮಿ, ಹೆಚ್.ಗೌರಮ್ಮ, ಸುರೇಶ್ ಬಾಬು ಮತ್ತು ಕುಟುಂಬ ವರ್ಗದವರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ದೌರ್ಜನ್ಯ ತಡೆ ಕಾಯ್ದೆ ತಿದ್ದುಪಡಿ ಮಾಹಿತಿ ಕಾರ್ಯಾಗಾರ

ಸ್ಲಂ ಜನಾಂದೋಲನ-ಕರ್ನಾಟಕ ಹಾಗೂ ಸಾವಿತ್ರಿಬಾಯಿ ಫುಲೆ ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿ ಆಶ್ರಯದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ತಿದ್ದುಪಡಿ-2015ರ ಮಾಹಿತಿ ಕಾರ್ಯಾಗಾರವು ಇಂದು ಬೆಳಿಗ್ಗೆ 11 ಕ್ಕೆ ರೋಟರಿ ಬಾಲಭವನದಲ್ಲಿ ನಡೆಯಲಿದೆ.

ಉದ್ಘಾಟನೆ : ಎಲ್.ಹೆಚ್. ಅರುಣ್‌ಕುಮಾರ್. ಅಧ್ಯಕ್ಷತೆ : ಎಂ. ಶಬ್ಬೀರ್ ಸಾಬ್. ಮುಖ್ಯ ಅತಿಥಿಗಳು : ಶಿವಮಣಿ ಧನ್, ನರಸಿಂಹಪ್ಪ, ಬಸವ ಪ್ರಸಾದ್ ಕುನಾಲೆ, ಆನಂದಪ್ಪ ಎಸ್.ಎಲ್, ಹೆಗ್ಗೆರೆ ರಂಗಪ್ಪ.

## ನಗರದಲ್ಲಿ ಇಂದು ಬಸವ ಜಯಂತಿ, ವಿಶ್ವ ತಾಯಂದಿರ ದಿನಾಚರಣೆ

ದಾವಣಗೆರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ವನಿತಾ ಸಮಾಜ ಹಾಗೂ 'ಪ್ರಜ್ಞಾ' ಆಲ್ ಇಂಡಿಯಾ ವುಮೆನ್ಸ್ ಕಾನ್ಫರೆನ್ಸ್ ಇವರ ಸಹಯೋಗದೊಂದಿಗೆ ಬಸವ ಜಯಂತಿ, ವಿಶ್ವ ತಾಯಂದಿರ ದಿನಾಚರಣೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಇಂದು ಸಂಜೆ 5 ಗಂಟೆಗೆ ಹಿರಿಯ ವನಿತೆಯರ ಆಶ್ರಯಧಾಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಡಾ. ಸಿ. ನಾಗಮ್ಮ ಕೇಶವಮೂರ್ತಿ ಉದ್ಘಾಟಿಸುವರು. ಶ್ರೀಮತಿ ಎಸ್.ಎಂ. ಮಲ್ಲಮ್ಮ ನಾಗರಾಜ್ ಅವರು 'ಇಂದಿನ ಸಮಾಜದಲ್ಲಿ ವಚನ ಸಾಹಿತ್ಯದ ಅಗತ್ಯತೆ' ವಿಷಯ ಕುರಿತು ಉಪನ್ಯಾಸ ನೀಡುವರು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ಪ್ರೇಮಾ ನಾಗರಾಜ್, ಶ್ರೀಮತಿ ವೀಣಾ ಕೃಷ್ಣಮೂರ್ತಿ ಆಗಮಿಸುವರು. ಶ್ರೀಮತಿ ನೀಲಗುಂದ ಜಯಮ್ಮ ಅಧ್ಯಕ್ಷತೆ ವಹಿಸುವರು. ಶ್ರೀಮತಿ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಕಾರ್ಯಕ್ರಮದಲ್ಲಿ ನೀಲಗುಂದ ಸಿದ್ದರಾಮಣ್ಣ ಚನ್ನಮ್ಮ ಸ್ಮರಣಾರ್ಥ ದತ್ತಿ - ದಾನಿಗಳು : ಶ್ರೀಮತಿ ಜಯಮ್ಮ ನೀಲಗುಂದ ಮತ್ತು ನೀಲಗುಂದ ಡಾ. ಜಯಲಕ್ಷ್ಮಿ ಸುರೇಂದ್ರ ಅವರಿಂದ ಮತ್ತು ಬೂದುಗುಂಪಿ ಮಠದ ರಮೇಶ್ ಪೌಢಶಾಲೆ ವಿದ್ಯಾರ್ಥಿಗಳ ದತ್ತಿ - ದಾನಿಗಳು : ಶ್ರೀಮತಿ ಟಿ. ಆರುಂಧತಿ ಹಾಗೂ ಸುಬ್ರಹ್ಮಣ್ಣ ಅಮೃತಾಪುರ ಶ್ರೀನಿವಾಸರಾವ್ ಸ್ಮರಣಾರ್ಥ ದತ್ತಿ - ದಾನಿಗಳು : ಭಾಗ್ಯಲಕ್ಷ್ಮಿ ಸು. ಅಮೃತಾಪುರ ಅವರಿಂದ ನಡೆಯುವುದು.

## ನಗರದಲ್ಲಿಂದು ಉದ್ಯೋಗಕ್ಕೆ ಸಂದರ್ಶನ

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಇಂದು ವಾಕ್ ಇನ್-ಇಂಟರ್‌ವೀವ್ ಆಯೋಜಿಸಲಾಗಿದೆ. ವಾಕ್ ಇನ್ ಇಂಟರ್‌ವೀವ್‌ನಲ್ಲಿ ಖಾಸಗಿ ಕಂಪನಿಯಾದ ಫ್ಲಿಪ್ ಕಾರ್ಟ್ ಈ ಸಂಸ್ಥೆ ಭಾಗವಹಿಸುತ್ತಿದ್ದು, ಪಿಯುಸಿ, ಡಿಪ್ಲೋಮಾ ಅಥವಾ ಯಾವುದೇ ಪದವಿ ವ್ಯಾಸಂಗ ಪೂರೈಸಿದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲಿದೆ.

ಆಸಕ್ತ ಅಭ್ಯರ್ಥಿಗಳು ಇಂದು ಬೆಳಿಗ್ಗೆ 10 ಗಂಟೆಗೆ ದಾಖಲಾತಿ ಗಳೊಂ ದಿಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೊಠಡಿ ಸಂಖ್ಯೆ-51, ಜಿಲ್ಲಾಡ ಳಿತ ಭವನ ಇಲ್ಲಿ ನಡೆಯಲಿರುವ ಸಂದರ್ಶನದಲ್ಲಿ ಭಾಗವಹಿಸಬಹುದು. ವಿವರಕ್ಕೆ 08192-259446, 63615 50016, 74063 23294ಗೆ ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಗಿರೀಶ್ ತಿಳಿಸಿದ್ದಾರೆ.

## ಎಟಿಎಂ ಎಂದರೆ ಎನಿ ಟೈಮ್ ಮನಿ, ಆದರೆ ಈ ಬ್ಯಾಂಕಿನ ಎಟಿಎಂ ಎಂದರೆ



### ಓದುಗರ ಪತ್ರ

ಮಾನ್ಯರೇ,

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಬದಲಾವಣೆ ಬಂದು ಗ್ರಾಹಕರಿಗೆ ಅನುಕೂಲವಾಗಲಿ ಹಾಗೂ ಅವರಿಗೆ ಸದಾ ಸೇವೆ ನೀಡಬೇಕು ಎಂಬ ಕಾರಣಕ್ಕೆ ಎಟಿಎಂ ಗಳನ್ನು ಪ್ರಾರಂಭಿಸಲಾಯಿತು, ಎಟಿಎಂ ಎಂದರೆ ಎನಿ ಟೈಮ್ ಮನಿ.... ಗ್ರಾಹಕರು ದಿನದ 24 ಗಂಟೆಯಲ್ಲಿ ಯಾವಾಗಬೇಕಾದರೂ ಹಣ ಪಡೆಯಬಹುದು ಎಂಬ ಕಾರಣಕ್ಕೆ ಈ ವ್ಯವಸ್ಥೆ ಪ್ರಾರಂಭಿಸಲಾಗಿತ್ತು.

ಇದಕ್ಕೆ ಅಪವಾದವೆಂಬಂತೆ ದಾವಣ ಗೆರೆ ಮಂಡಿಪೇಟೆಯ ಕೆನರಾ ಬ್ಯಾಂಕ್ ಬ್ರಾಂಚ್ ಮುಂಭಾಗವಿರುವ ಕೆನರಾ ಬ್ಯಾಂಕ್ ಎಟಿಎಂ ಗೆ ಸಂಜೆಯಾಯಿತೆಂದರೆ ಬೀಗ ಜಡಿಯಲಾಗುತ್ತದೆ, ಗ್ರಾಹಕರು ಹಣ ಪಡೆಯಲು ಎಟಿಎಂ ಮುಂಭಾಗ ಬಂದಾಗ ಎಟಿಎಂ ಒಳಗಡೆ ದೀಪ ಉರಿಯುತ್ತಿದ್ದರೆ, ಮುಂಭಾಗದ ಬಾಗಿಲಿಗೆ ಮಾತ್ರ ಬೀಗ ಬಿದ್ದಿರುತ್ತದೆ. ಗ್ರಾಹಕರು ಹಿಡಿ ಶಾಪ ಹಾಕುತ್ತಾ ತೆರಳುತ್ತಿರುವುದು ಮಾತ್ರ ಸಾಮಾನ್ಯವಾಗಿದೆ.

ಸಂಜೆ ಎಟಿಎಂಗೆ ಬೀಗ ಹಾಕುತ್ತಿದ್ದ ಬ್ಯಾಂಕ್ ಸಿಬ್ಬಂದಿ ಮಹಾವೀರ್ ಎಂಬುವವರಿಗೆ ಗ್ರಾಹಕರೊಬ್ಬರು ಆಸ್ಪತ್ರೆಗೆ ಹಣ ಕಟ್ಟಲು ಹೋಗಬೇಕು ದಯಮಾಡಿ ಬೀಗ ತೆಗೆಯಿರಿ ಎಂದಾಗ, ತಾವು ಪ್ರತಿದಿನ ಇದಕ್ಕೂ ಮುನ್ನ ಬೀಗ ಹಾಕುತ್ತೇವೆ, ಇಂದು ಸ್ವಲ್ಪ ಲೇಟಾಗಿದೆ ಅಷ್ಟೇ ಎಂಬ ಉಡಾಫೆ ಉತ್ತರ ನೀಡುವ ಮೂಲಕ ಪಲಾಯನ ಮಾಡಿದ್ದು ಮಾತ್ರ ಬೇಸರವಾಯಿತು.

ಸಂಬಂಧಪಟ್ಟ ಬ್ಯಾಂಕ್‌ನ ಮೇಲಾಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ, ಗ್ರಾಹಕರಿಗೆ ದಿನದ 24 ಗಂಟೆಗಳ ಕಾಲ ಎಟಿಎಂ ಸೌಲಭ್ಯ ದೊರೆಯುವಂತೆ ಮಾಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇವೆ.

**-ಕೆ.ಎಲ್.ಹರೀಶ್ ಬಸಾಪುರ**

# ಕಂದಗಲ್ಲು : ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಉದ್ಘಾಟನೆ ಇಂದು

ದಾವಣಗೆರೆ, ಮೇ 12- ತಾಲ್ಲೂಕಿನ ಕಂದಗಲ್ಲು ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಕಳಸಾರೋಹಣ, ಪ್ರಾಣ ಪ್ರತಿಷ್ಠಾಪನೆ ಹಾಗೂ ಶ್ರೀ ಆಂಜನೇಯ ಸ್ವಾಮಿ ಮಹಾದ್ವಾರ ಮತ್ತು ನವಗ್ರಹ ಮಂಟಪದ ಉದ್ಘಾಟನಾ ಸಮಾರಂಭ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಾಳೆ ದಿನಾಂಕ 13ರ ಶುಕ್ರವಾರದಿಂದ 15ರ ಭಾನುವಾರದ ವರೆಗೆ ನಡೆಯಲಿವೆ.

13ರ ಶುಕ್ರವಾರ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ ಉದ್ಘಾಟಿಸಲಿದ್ದಾರೆ. ಸ್ವಾಮಿಯ ಪ್ರಾಣ ಪ್ರತಿಷ್ಠಾಪನೆ, ನೇತ್ರೋನ್ಮಿಲನ (ಜೀವ ಕಳಶ) ಕಳಶಾರೋಹಣವು ಶ್ರೀ ಮಹಾಂತ ರುದ್ರೇಶ್ವರ ಮಹಾಸ್ವಾಮೀಜಿ ಯವರಿಂದ ನೆರವೇರಲಿವೆ ಎಂದು ದೇವಸ್ಥಾನ ನಿರ್ಮಾಣ ಸಮಿತಿ ಖಜಾಂಚಿ ಕೆ.ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

ಗ್ರಾಮದ ಶ್ರೀ ಹೆಚ್.ಸಿದ್ಧವೀರಪ್ಪ ಪ್ರೌಢಶಾಲಾ ಆವರಣದಲ್ಲಿ ಶ್ರೀ ವಿಶ್ವಗುರು ಬಸವಣ್ಣ ಮಹಾವೇದಿಕೆಯಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮದ ಸಾನ್ನಿಧ್ಯವನ್ನು ಉಭಯ ಶ್ರೀಗಳು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಪ್ರೊ.ಎನ್. ಲಿಂಗಣ್ಣ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗು ಇತರರು ಆಗಮಿಸಲಿದ್ದಾರೆ.

ಮಧ್ಯಾಹ್ನ 2ಕ್ಕೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಉಪನ್ಯಾಸ ನೀಡುವರು. ಮಧ್ಯಾಹ್ನ 3 ಕ್ಕೆ ವಿವೇಕ ಜಾಗೃತ ಬಳಗದ ಕೆ.ಜಿ. ಕರಿಸಿದ್ದಪ್ಪ, ಬಿ. ರೇವಣಸಿದ್ದಪ್ಪ ಅವರಿಂದ ಸತ್ಸಂಗ ಕಾರ್ಯಕ್ರಮ. ಸಂಜೆ 4ಕ್ಕೆ ಸಂಗೀತ ಸಂಜೆ. 6.30ರಿಂದ ತರಳಬಾಳು ಕಲಾ ಸಂಘದಿಂದ ಜಾನಪದ ಸಿರಿ ಕಾರ್ಯಕ್ರಮ ನಡೆಯಲಿದೆ.

ನಾಳೆ ಶನಿವಾರ ಬೆಳಿಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಕುಮಾರಪಟ್ಟಣಂ ಪುಣ್ಯಕೋಟಿ ಮಠದ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ, ಚಿಕ್ಕಮಗಳೂರು ಬಸವ ತತ್ವ ಪೀಠದ ಶ್ರೀ ಬಸವ ಮುರುಳಸಿದ್ದ ಸ್ವಾಮೀಜಿ, ನಿಜಗುಣ ಅಂಬಿಗರ ಚೌಡಯ್ಯ ಪೀಠಾಧ್ಯಕ್ಷರಾದ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ವಹಿಸಲಿದ್ದಾರೆ. ಸಾಹಿತಿ ಚಟ್ನಳ್ಳಿ ಮಹೇಶ್ ಉಪನ್ಯಾಸ ನೀಡಲಿದ್ದಾರೆ.

ನಂತರ ಕೃಷಿ ಮತ್ತು ತೋಟಗಾರಿಕೆ ವಿಚಾರ ಸಂಕಿರಣ. ಕಾನೂನು ಅರಿವು ಕಾರ್ಯಾಗಾರ, ರೈತ ಮತ್ತು ವಿಜ್ಞಾನಿಗಳ ಸಂವಾದ ಕಾರ್ಯಕ್ರಮ ನಡೆಯಲಿದೆ. ಸಂಜೆ ಭಕ್ತಿಗೀತೆ ಹಾಗೂ ಹಾಸ್ಯ ಸಂಜೆ ಕಾರ್ಯಕ್ರಮಗಳಿವೆ.

ದಿನಾಂಕ 15ರ ಭಾನುವಾರ ಬೆಳಿಗ್ಗೆ ಡಾ.ಶಿವಮೂರ್ತಿ ಮುರುಘಾ ಶರಣರ ಸಾನ್ನಿಧ್ಯದಲ್ಲಿ ಶರಣ ಸಂಗಮ ನಡೆಯಲಿದೆ. ಶ್ರೀ ಬಸವ ಮಾಚಿದೇವ ಮಹಾಸ್ವಾಮೀಜಿ, ಶ್ರೀ ಬಸವ ಮಾದಾರ ಚೆನ್ನಯ್ಯ ಸ್ವಾಮೀಜಿ, ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಶ್ರೀ ಜಗದ್ಗುರು ಅನ್ನದಾನ ಭಾರತಿ ಅಪ್ಪಣ್ಣ ಸ್ವಾಮೀಜಿ, ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಶ್ರೀ ಗುರೂಜಿ ವೆಂಕಪ್ಪಯ್ಯ ಒಡೆಯರ್ ಸ್ವಾಮೀಜಿ, ಶ್ರೀ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ ಭಾಗವಹಿಸಲಿದ್ದಾರೆ.

ಕಂದಗಲ್ ಮಂಜುನಾಥ್, ಟಿ.ಕೆ. ಬಸವರಾಜಪ್ಪ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


## ಕಿವುಡ - ಮೂಕ ಹೆಣ್ಣು ಮಕ್ಕಳ ವಸತಿ ನಿಲಯ 'ವಿಮೋಚನ' ದಿಂದ ವೃತ್ತಿ ತರಬೇತಿ

ದಾವಣಗೆರೆ, ಮೇ 12- ನಗರದ ವನಿತಾ ಸಮಾಜದ ವತಿಯಿಂದ ನಡೆಯುತ್ತಿರುವ ಕಿವುಡ ಮತ್ತು ಮೂಕ ಹೆಣ್ಣು ಮಕ್ಕಳ ವಸತಿ ನಿಲಯ 'ವಿಮೋಚನ' ದಿಂದ ಊಟ ಮತ್ತು ವಸತಿಯೊಂದಿಗೆ ಉಚಿತವಾಗಿ ವಿವಿಧ ವೃತ್ತಿ ತರಬೇತಿ ನೀಡಲಾಗುತ್ತದೆ ಎಂದು ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಪ್ರಭಾ ರವೀಂದ್ರ (99640-73817) ತಿಳಿಸಿದ್ದಾರೆ.

15 ವರ್ಷ ಮೇಲ್ಪಟ್ಟ ಕಿವುಡ ಮತ್ತು ಮೂಕ ಹೆಣ್ಣು ಮಕ್ಕಳಿಗಾಗಿ ಈ ತರಬೇತಿ ನಡೆಯಲಿದ್ದು, ಭಾಗವಹಿಸಲಿಚ್ಛಿಸುವವರು ಬರುವ ಜೂನ್ 1 ರ ಬೆಳಿಗ್ಗೆ 11 ಗಂಟೆಗೆ ಸ್ಥಳೀಯ ಎಂ.ಸಿ.ಸಿ 'ಎ' ಬ್ಲಾಕ್, 7ನೇ ಮುಖ್ಯ ರಸ್ತೆಯಲ್ಲಿರುವ ಕಿವುಡ ಮತ್ತು ಮೂಕ ಹೆಣ್ಣು ಮಕ್ಕಳ ವಸತಿ ನಿಲಯ 'ವಿಮೋಚನ' ದಲ್ಲಿ ಆಧಾರ್ ಕಾರ್ಡ್, 1 ಭಾವಚಿತ್ರ ಮತ್ತು ಪೋಷಕರೊಂದಿಗೆ ಹಾಜರಿರಬೇಕು.

ಕಂಪ್ಯೂಟರ್, ಟೈಲರಿಂಗ್, ಬ್ಯೂಟಿಷಿಯನ್, ಕರಕುಶಲ ವಸ್ತು, ಎಂಬ್ರಾಯಿಡರಿ ತರಬೇತಿ ನೀಡಲಾಗುತ್ತದೆ. ಬರುವ ಜೂನ್ 1ರಿಂದ ತರಗತಿಗಳು ಆರಂಭವಾಗಲಿದ್ದು, ತರಬೇತಿಯಲ್ಲಿ ಭಾಗವಹಿಸಲಿಚ್ಛಿಸುವ ಕಿವುಡ ಮತ್ತು ಮೂಕ ಹೆಣ್ಣು ಮಕ್ಕಳು ಕಾರ್ಯದರ್ಶಿ ಶ್ರೀಮತಿ ನಂದಿನಿ (78995-42949) ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸುವಂತೆ ಖಜಾಂಚಿ ಶ್ರೀಮತಿ ಪದ್ಮಾ ಡಾ. ಬಿ.ಎಸ್. ನಾಗಪ್ರಕಾಶ್ (85480-38945) ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಓಂ ಶ್ರೀ ಸಾಯಿ ವೈಷ್ಣವಿದೇವಿ ಜ್ಯೋತಿಷ್ಯಾಲಯ



ಪಂಡಿತ್ ವಿಶ್ವನಾಥ್ ಗುರೂಜಿ
ಕೊಳ್ಳೇಗಾಲದ ನಂ.1 ಜ್ಯೋತಿಷ್ಯರು.
ಮೊ: 91087 03626

ಕುಟುಂಬ ಸಮಸ್ಯೆ, ಸಂತಾನ, ಪ್ರೇಮ ವಿಚಾರ, ದಾಂಪತ್ಯದಲ್ಲಿ ತೊಂದರೆ, ಸಾಲದ ಬಾಧೆ, ಜಾಗದ ವಿಚಾರ, ಆರೋಗ್ಯ, ಬಿಸಿನೆಸ್, ಮನಃಶಾಂತಿ, ಶತ್ರುಕಾಟ, ಮಾಟ ಮಂತ್ರ, ಯಾವುದೇ ರೀತಿಯ ಗುಪ್ತ ಸಮಸ್ಯೆಗಳಿದ್ದರೂ ವೈಷ್ಣವಿ ದೇವಿ ಬಲಿಷ್ಠ ಪೂಜೆಯಿಂದ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ 100% ಗ್ಯಾರಂಟಿ. ಇಂದೇ ಭೇಟಿ ಕೊಡಿ.

ವಿಳಾಸ: ಶಾಮನೂರು ರಸ್ತೆ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ದಾವಣಗೆರೆ.




**ಗುಲ್ ಮೊಹರ್** ದಾವಣಗೆರೆಯ ಕುಂದುವಾಡ ಕೆರೆಯ ಬಳಿ ದೇಹಕ್ಕೂ ಮತ್ತು ನೋಡುವ ಕಣ್ಣಿಗೂ ತಂಪು ನೀಡುವ ಗುಲ್ ಮೊಹರ್ ಮರಗಳು ಮೈದೆಳೆದು ನಿಂತಿವೆ. ಜನರ ಮನಸ್ಸನ್ನು ಮೋಹಕಗೊಳಿಸುತ್ತಾ ತಮ್ಮತ್ತ ಕೈ ಬೀಸಿ ಕರೆಯುತ್ತಿವೆ.

# ನಗರಕ್ಕೆ ಇಂದು ನಾಗಾಭರಣ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಇಂದು ನಗರಕ್ಕೆ ಆಗಮಿಸಲಿದ್ದು, ಪ್ರಾಧಿಕಾರದ, ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಹಾಗೂ ಮಹಾನಗರ ಪಾಲಿಕೆ ಕನ್ನಡ ಜಾಗೃತಿ ಸಮಿತಿ ಇವರುಗಳ ಸಂಯುಕ್ತಾಶ್ರಯದಲ್ಲಿ ಕುವೆಂಪು ಕನ್ನಡ ಭವನದಲ್ಲಿ ಬೆಳಿಗ್ಗೆ 11.30ಕ್ಕೆ ಹಮ್ಮಿಕೊಳ್ಳಲಾಗಿರುವ 'ಕನ್ನಡ ನುಡಿ-ನಡೆ ಕಾಯಕ' ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿ.ಪಂ. ಸಿಇಒ ಡಾ.ಎ.ಚನ್ನಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ್, ಸದಸ್ಯ ಡಾ.ಸಿ.ಎ. ಕಿಶೋರ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಭಾಗವಹಿಸಲಿದ್ದಾರೆ.





ಡಾ. ಯದು ಕೆ. ಎಲ್.
ಸಲಹೆಗಾರರು ನರಶಸ್ತ್ರ ಚಿಕಿತ್ಸಕರು ಮತ್ತು ಬೆನ್ನುಮೂಳೆಯ ಶಸ್ತ್ರಚಿಕಿತ್ಸಕರು
ಆಸ್ಟರ್ ಆಸ್ಪತ್ರೆ, ಬೆಂಗಳೂರು

ಯದು ಕಿವಿ-ಮೂಗು-ಗಂಟಲು / ಮೆದುಳು ಮತ್ತು ಬೆನ್ನುಮೂಳೆಯ ಸೆಂಟರ್
# 462, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ.
ಮೇ 14 ರ ಶನಿವಾರ 2022 , (ಪ್ರತಿ ತಿಂಗಳ 2ನೇ ಶನಿವಾರ)
ಬೆಳಿಗ್ಗೆ 10:00 ರಿಂದ ಸಂಜೆ 3:00ರ ವರೆಗೆ

ಈ ಕೆಳಗಿನ ವೈದ್ಯಕೀಯ ಸ್ಥಿತಿಯಲ್ಲಿರುವವರು ಭೇಟಿ ನೀಡಬಹುದು:
- ಮೆದುಳಿನ ಅಸ್ವಸ್ಥತೆಗಳು ▪ ತಲೆ ನೋವು ▪ ಆಘಾತಕಾರಿ ಮೆದುಳು ಗಾಯಗಳು ▪ ಮೆದುಳಿನ ಗಡ್ಡೆ ▪ ಪಾರ್ಶ್ವವಾಯು ▪ ಅಪಸ್ಮಾರ ▪ ಬೆನ್ನುಮೂಳೆಯ ತೊಂದರೆಗಳು ▪ ಬೆನ್ನು ನೋವು ▪ ಕುತ್ತಿಗೆ ನೋವು ▪ ಕಾಲು ನೋವು ▪ ಆಘಾತಕಾರಿ ಬೆನ್ನುಮೂಳೆ ಗಾಯಗಳು ▪ ಬೆನ್ನುಮೂಳೆಯ ವಿರೂಪ

ಕರೆಮಾಡಿ: 08192231033 / 9483964373 / 8296099030

CA-37, 24th Main, 1st Phase,
J.P. Nagar, Bangalore 560078.
Aster RV HOSPITAL We'll Treat You Well


# ಛದ್ಮವೇಷದ ಪತಂಗ

ಲಕ್ಷಾಂತರ ಜೀವಿಗಳು ಪ್ರಕೃತಿಯ ಮೂಸೆಯಲ್ಲಿ ಹೊರಬಂದು ಯಶಸ್ವೀ ಜೀವನ ನಡೆಸುತ್ತಿವೆ. ಒಂದನ್ನೊಂದು ಅವಲಂಬಿಸಿ ತನ್ನ ಸಂತತಿ ಮುಂದುವರೆಸುತ್ತವೆ. ಮನೆಯ ಕೈತೋಟದಲ್ಲಿ ಕಂಡುಬಂದ ಈ ವಿಶೇಷ ಚೀಲ ಜೋತಾಡುತ್ತಿತ್ತು. ಏನಿದು ವಿಸ್ಮಯ ಎಂದು ನೋಡಿದರೆ ಇದೊಂದು ಗೂಡು. ಚಿಟ್ಟೆ ಮತ್ತು ಪತಂಗಗಳ ಜೀವನ ಚಕ್ರ ಮೊಟ್ಟೆ, ಕಂಬಳಿ ಹುಳು, ಕವಚ (ಪ್ಯೂಪ) ಮತ್ತು ವಯಸ್ಕ ಎಂಬ ನಾಲ್ಕು ಹಂತಗಳನ್ನೊಳಗೊಂಡಿದೆ.



ಬ್ಯಾಗ್ ವರ್ಮ್ ಎಂಬ ಪತಂಗ ಗಿಡದಲ್ಲಿ ಮೊಟ್ಟೆಯಿಡುತ್ತದೆ. ಮೊಟ್ಟೆಯಿಂದ ಹೊರ ಬಂದ ಮರಿ ತನ್ನ ಜೊಲ್ಲಿನಿಂದ ಅಕ್ಕಪಕ್ಕ ಸಿಗುವ ವಸ್ತುಗಳನ್ನು ಅಂಟಿಸುತ್ತಾ ತನಗಾಗಿ ಒಂದು ಕಸದ ಚೀಲ ಮಾಡಿಕೊಳ್ಳುತ್ತದೆ.

ಈ ಪತಂಗದ ಕಂಬಳಿ ಹುಳು ಈ ಚೀಲದ ಒಳಗೆ ಇದ್ದು ಚೀಲದ ಬುಡದಿಂದ ಮೆಲ್ಲನೆ ತಲೆ ಹೊರಗೆ ಹಾಕಿ ಗಿಡದ ಎಲೆಗಳನ್ನು ತಿನ್ನುತ್ತದೆ. ಗಿಡದಲ್ಲಿದ್ದಾಗ ತನ್ನನ್ನು ಬೇಟೆಯಾಡಲು ಬರುವ ಹಕ್ಕಿ ಮತ್ತು ಹಲ್ಲಿಗಳಿಂದ ರಕ್ಷಿಸಿಕೊಳ್ಳಲು ಈ ಕಂಬಳಿಹುಳು ನೈಸರ್ಗಿಕವಾಗಿರುವ ಕಡ್ಡಿಗಳನ್ನು ತನ್ನ ಸುತ್ತಾ ಜೋಡಿಸಿಕೊಂಡು ಛದ್ಮವೇಷ ಧರಿಸುತ್ತದೆ.

ಯಾವುದೋ ಒಣಗಿದ ಕಡ್ಡಿಗಳು ಬಿದ್ದಿದೆ ಎಂದು ಕೊಳ್ಳುವ ಬೇಟೆಗಾರ ಪ್ರಾಣಿಗಳಿಂದ ರಕ್ಷಣೆಗಾಗಿ ಈ ಉಪಾಯ. ಸೈಕಿಡೆ ಕುಟುಂಬಕ್ಕೆ ಸೇರಿದ ಈ ಪತಂಗಗಳಲ್ಲಿ 1350 ಪ್ರಭೇದಗಳಿವೆ ಎಂದು ತಿಳಿದು ಬಂದಿದೆ. ರೇಷ್ಮೆ ಹುಳು ಹೇಗೆ ತನ್ನ ಸುತ್ತ ದಾರವನ್ನು ಹೆಣೆಯುತ್ತದೆಯೋ ಅದೇ ರೀತಿಯಲ್ಲಿ ಇಲ್ಲಿ ಕಸದ ಚೀಲ ತಯಾರಾಗುವುದು. ನಾಲ್ಕು ವಾರಗಳ ನಂತರ ವಯಸ್ಕ ಹುಳು ಈ ಚೀಲದಿಂದ ಹೊರಕ್ಕೆ ಹಾರುತ್ತದೆ. ಪ್ರಕೃತಿಯಲ್ಲಿ ಇಂತಹ ವೈಶಿಷ್ಟ್ಯಗಳು ಅದೆಷ್ಟಿವೆಯೋ?

**- ಡಾ. ಎಸ್. ಶಿಶುಪಾಲ**
ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ

# 15 ವರ್ಷದ ಹಳೆ ವಾಹನಗಳ ದುಬಾರಿ ದಂಡಕ್ಕೆ ತಡೆ

ಬೆಂಗಳೂರು, ಮೇ 12 – ಹದಿನೈದು ವರ್ಷಗಳಿಗೂ ಹಳೆಯ ವಾಹನಗಳಿಗೆ ಹೆಚ್ಚಿನ ಶುಲ್ಕ ಹಾಗೂ ದಂಡ ವಿಧಿಸುವ ಕೇಂದ್ರ ರಸ್ತೆ ಸಾರಿಗೆ ಸಚಿವಾಲಯದ ಆದೇಶಕ್ಕೆ ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ಕಳೆದ ಏಪ್ರಿಲ್ 1ರಿಂದ ಹೆಚ್ಚಳ ಮಾಡಲಾದ ದರ ಜಾರಿಗೆ ಬಂದಿದೆ. ಕಳೆದ ವರ್ಷ ಅಕ್ಟೋಬರ್ 4ರಂದು ಈ ಬಗ್ಗೆ ಅಧಿಸೂಚನೆ ಹೊರಡಿಸಲಾಗಿತ್ತು.

ಕೇಂದ್ರ ಸರ್ಕಾರ ಇದಕ್ಕೂ ಮುಂಚೆ ಹೊರಡಿಸಿದ್ದ ಇದೇ ರೀತಿಯ ಅಧಿಸೂಚನೆಯನ್ನು ಹೈಕೋರ್ಟ್ 2017ರಲ್ಲಿ ತಳ್ಳಿ ಹಾಕಿತ್ತು.

ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರ ನೇತೃತ್ವದ ಹೈಕೋರ್ಟ್ ರಜೆ ಪೀಠ ಅಧಿಸೂ ಚನೆಗೆ ಮುಂದಿನ ವಿಚಾರಣೆವರೆಗೆ ತಡೆಯಾಜ್ಞೆ ಹೊರಡಿಸಿದೆ. ಅಧಿಸೂಚನೆಯನ್ನು ಪ್ರಶ್ನಿಸಿ ಕರ್ನಾಟಕ ಲಾರಿ ಮಾಲೀಕರ ಒಕ್ಕೂಟ ಹೈಕೋರ್ಟ್ ಮೊರೆ ಹೋಗಿತ್ತು.

15 ವರ್ಷಗಳಿಗೂ ಹಳೆಯ ಕಾರುಗಳ ನೋಂದಣಿ, ನವೀಕರಣ ಶುಲ್ಕವನ್ನು 600 ರೂ.ಗಳಿಂದ 5 ಸಾವಿರ ರೂ.ಗಳಿಗೆ ಹಾಗೂ ಬೈಕ್‌ಗಳ ನವೀಕರಣ ಶುಲ್ಕವನ್ನು 300 ರೂ.ಗಳಿಂದ 1,000 ರೂ.ಗಳಿಗೆ ಹೆಚ್ಚಿಸಲಾಗಿತ್ತು.

ಹದಿನೈದು ವರ್ಷಗಳಿಗೂ ಹಳೆಯ ಬಸ್ ಹಾಗೂ ಲಾರಿಗಳ ಎಫ್.ಸಿ. ನವೀಕರಣ ಶುಲ್ಕವನ್ನು 1,500 ರೂ.ಗಳಿಂದ 12,500 ರೂ.ಗಳಿಗೆ ಹೆಚ್ಚಿಸಲಾಗಿತ್ತು. ವಾಣಿಜ್ಯ ವಾಹನಗಳು ಪ್ರತಿ ವರ್ಷ ಎಫ್.ಸಿ. ನವೀಕರಿಸುವುದು ಕಡ್ಡಾಯವಾಗಿದೆ.

# ಆರ್.ಎಲ್. ಚಂದ್ರಶೇಖರ್ ನಿಧನ



ದಾವಣಗೆರೆ ಕೆಟಿಜೆ ನಗರ 16ನೇ ಕ್ರಾಸ್ ವಾಸಿ, ಕುರುಹಿನಶೆಟ್ಟಿ ಸಮಾಜದ ಮಾಜಿ ಅಧ್ಯಕ್ಷರಾಗಿದ್ದ ದಿ|| ಶ್ರೀ ಆರ್.ಎಲ್. ಹನುಮಂತಪ್ಪನವರ ಸಹೋದರ

**ಶ್ರೀ ಆರ್.ಎಲ್. ಚಂದ್ರಶೇಖರ್**

ಅವರು ದಿನಾಂಕ 12.05.2022 ಗುರುವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 52 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.05.2022ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಲೇಬರ್ ಕಾಲೋನಿಯ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**
ಮೊ: 98862 25193, 98452 79510

# ಆರು ದಿನಗಳಲ್ಲಿಯೇ ಅಧಿಕಾರ ಕಳೆದುಕೊಂಡ ಪ್ರಾಧಿಕಾರದ ಅಧ್ಯಕ್ಷ



**ರಾಣೇಬೆನ್ನೂರು**

ರಾಣೇಬೆನ್ನೂರು, ಮೇ 12 - ಸರ್ಕಾರದಿಂದ ಇಲ್ಲಿನ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕಗೊಂಡು, ದಿನಾಂಕ 5 ರಂದು ಅಧಿಕಾರ ಸ್ವೀಕರಿಸಿದ ಶಿವಕುಮಾರ ನರಸಗೊಂಡರ ಅವರನ್ನು ಬದಲಾಯಿಸಿ, ದೀಪಕ್ ಹರಪನಹಳ್ಳಿ ಅವರನ್ನು ನೇಮಕ ಮಾಡಿದ ನಗರಾಭಿವೃದ್ಧಿ ಇಲಾಖೆಯ ಆದೇಶ ದಿನಾಂಕ 11 ರಂದು ಹೊರಬಿದ್ದಿದೆ.

ಕೇವಲ ಆರೇ ದಿನಗಳಲ್ಲಿ ಸರ್ಕಾರದ ಆದೇಶ ಬದಲಾವಣೆಯಾಗಲು ಶಾಸಕ ಹಾಗೂ ವಿಧಾನ ಪರಿಷತ್ ಸದಸ್ಯರ ನಡುವೆ ಇರುವ ಭಿನ್ನಾಭಿಪ್ರಾಯ ಹಾಗೂ ಆಕಾಂಕ್ಷಿಗಳ ರಾಜೀನಾಮೆಯ ತಂತ್ರಗಾರಿಕೆ ಮತ್ತು ಒತ್ತಡಗಳು ಪ್ರಭಾವ ಬೀರಿವೆ ಎನ್ನುವ ಊಹೆ ಅನೇಕರಿಂದ ಕೇಳಿಬರುತ್ತಿದೆ. ದೀಪಕ್ ಹರಪನಹಳ್ಳಿ ಅಧ್ಯಕ್ಷ, ಗೀತಾ ಜಂಬಗಿ, ಕುಮಾರ ಸಾಲಗೇರಿ, ರವಿ ತಳವಾರ ಅವರುಗಳು ಸದಸ್ಯರಾಗಿ ನೇಮಕ ಮಾಡಿದ ಇಲಾಖೆಯ ಆದೇಶ ಬಂದಿದೆ.

# ಮತದಾರರ ಪಟ್ಟಿ ಪರಿಷ್ಕರಣೆಗೆ ಮನೆ-ಮನೆ ಭೇಟಿ

ದಾವಣಗೆರೆ, ಮೇ 12- ದಾವಣಗೆರೆ ಉತ್ತರ ವಿಧಾನ ಸಭಾ ಕ್ಷೇತ್ರಕ್ಕೆ (ನಂ-106) ಸಂಬಂಧಿಸಿ ದಂತೆ ಮತದಾರರ ಪಟ್ಟಿಯ ಪರಿಷ್ಕರಣೆ ಕುರಿತು ಮನೆ ಮನೆ ಭೇಟಿ ಕಾರ್ಯಕ್ರಮವನ್ನು ಚುನಾವಣಾ ಆಯೋಗದ ಮೂಲಕ ಆಯೋಜಿಸಲಾಗಿದೆ ಎಂದು ಮತದಾರರ ನೋಂದಣಾಧಿಕಾರಿಗಳು ಹಾಗೂ ಪಾಲಿಕೆ ಉಪ ಆಯುಕ್ತರು (ಕಂದಾಯ) ತಿಳಿಸಿದ್ದಾರೆ.

18 ವರ್ಷ ಪೂರ್ಣಗೊಳ್ಳುವವರು, ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಲ್ಲದವರು, ಹೆಸರು ಕೈಬಿಟ್ಟು ಹೋಗಿರುವವರು, ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ತಿದ್ದುಪಡಿ ಮಾಡಿಸ ಬೇಕಾದಲ್ಲಿ ಮತ್ತು ಒಂದೇ ವಿಧಾನಸಭಾ ಕ್ಷೇತ್ರದ ಮತದಾರರು ಬೇರೆ ಮತಗಟ್ಟೆಗೆ ವರ್ಗಾಯಿಸಬೇಕಾಗಿದ್ದವರು ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಅವರು ಕೋರಿದ್ದಾರೆ.

# ಚುನಾವಣಾ ಆಯುಕ್ತರಾಗಿ ರಾಜೀವ್



ನವದೆಹಲಿ, ಮೇ 12 - ಚುನಾ ವಣಾ ಆಯುಕ್ತ ರಾಜೀವ್ ಕುಮಾರ್ ಅವರನ್ನು ಮುಂದಿನ ಮುಖ್ಯ ಚುನಾ ವಣಾ ಆಯುಕ್ತರನ್ನಾಗಿ ನೇಮಿಸಲಾ ಗಿದೆ. ನಾಡಿದ್ದು ದಿನಾಂಕ 14ರಂದು ಹಾಲಿ ಮುಖ್ಯ ಆಯುಕ್ತ ಸುಶೀಲ್ ಚಂದ್ರ ಹುದ್ದೆ ಯಿಂದ ಕೆಳಗಿಳಿದ ನಂತರ, ರಾಜೀವ್ ಕುಮಾರ್ ಅಧಿಕಾರ ವಹಿಸಿಕೊಳ್ಳಲಿ ದ್ದಾರೆ. ಫೆಬ್ರವರಿ 2025 ರವರೆಗೆ ಅವರು ಮುಖ್ಯ ಚುನಾವಣಾ ಆಯುಕ್ತರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಈ ಅವಧಿಯಲ್ಲಿ ರಾಷ್ಟ್ರಪತಿ ಹಾಗೂ ಉಪರಾಷ್ಟ್ರ ಪತಿಗಳ ಚುನಾವಣೆಗಳು ಬರಲಿವೆ. 2024ರ ಲೋಕಸಭೆ ಹಾಗೂ ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಗಳೂ ನಡೆಯಲಿವೆ.

# ರಾಣೇಬೆನ್ನೂರಿನಲ್ಲಿ ಇಂದು ನಗರಸಭೆ ಅಧ್ಯಕ್ಷರ ವಿರುದ್ಧ ಅವಿಶ್ವಾಸ

ರಾಣೇಬೆನ್ನೂರು, ಮೇ 12 - ಮಧ್ಯಾಹ್ನ 12 ಗಂಟೆಗೆ ನಗರಸಭೆ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಕೈಗೊಳ್ಳಲು ವಿಶೇಷ ಸಭೆ ಕರೆಯಲಾಗಿದೆ ಎಂದು ಪೌರಾಯುಕ್ತರು ತಿಳಿಸಿದ್ದಾರೆ.

ಶಾಸಕ ಅರುಣಕುಮಾರ ಪೂಜಾರ ಸೇರಿದಂತೆ, ಬಿಜೆಪಿಯ 17 ಜನ ಸದಸ್ಯರು ಅಧ್ಯಕ್ಷರ ವಿರುದ್ದ ಅವಿಶ್ವಾಸ ಮಂಡಿಸಲು ಮನವಿ ಸಲ್ಲಿಸಿದ್ದರು.

# ಚಿಲ್ಲರೆ ಹಣದುಬ್ಬರ ಎಂಟು ವರ್ಷಗಳಲ್ಲೇ ಅತಿ ಹೆಚ್ಚು

ನವದೆಹಲಿ, ಮೇ 12 – ಆಹಾರ ಹಾಗೂ ಇಂಧನ ಬೆಲೆ ಏರಿಕೆಯ ಕಾರಣದಿಂದಾಗಿ ಕಳೆದ ಏಪ್ರಿಲ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಎಂಟು ವರ್ಷಗಳಲ್ಲಿಯೇ ಅತಿ ಹೆಚ್ಚಿನ ಶೇ.7.79ಕ್ಕೆ ತಲುಪಿದೆ. ಇದರಿಂದಾಗಿ ರಿಸರ್ವ್ ಬ್ಯಾಂಕ್ ಮುಂದಿನ ತಿಂಗಳ ಹಣಕಾಸು ನೀತಿ ಪರಿಶೀಲನೆ ವೇಳೆ ಇನ್ನೊಂದು ಸುತ್ತು ಬಡ್ಡಿ ದರ ಹೆಚ್ಚಿಸಬಹುದು. ಚಿಲ್ಲರೆ ಹಣದುಬ್ಬರ ಈ ಹಿಂದೆ ಮೇ 2014ರಲ್ಲಿ ಶೇ.8.33ರಷ್ಟಿತ್ತು. ಈ ವರ್ಷ ಮಾರ್ಚ್ ತಿಂಗಳಲ್ಲಿ ಹಣದುಬ್ಬರ ಶೇ.6.95 ಹಾಗೂ ಕಳೆದ ವರ್ಷ ಏಪ್ರಿಲ್‌ನಲ್ಲಿ ಶೇ.4.23ರಷ್ಟಿತ್ತು.

# ಏಕಬಳಕೆ ಪ್ಲಾಸ್ಟಿಕ್ ವಶ 16 ಸಾವಿರ ದಂಡ

ದಾವಣಗೆರೆ, ಮೇ 12- ನಗರದ ಆಂಜನೇಯ ಬಡಾವಣೆ, ಕೆ.ಬಿ. ಬಡಾವಣೆ, ಪಿ. ಜೆ. ಬಡಾವಣೆ, ವಿದ್ಯಾರ್ಥಿ ಭವನ, ಹೂವಿನ ಮಾರುಕಟ್ಟೆ ಮತ್ತಿತರೆ ಭಾಗಗಳಲ್ಲಿ, ಅಂಗಡಿ, ಬೇಕರಿ, ತಳ್ಳುಗಾಡಿಗಳು, ಹೂವಿನ ಅಂಗಡಿಗಳ ಮೇಲೆ ದಾಳಿ ನಡೆಸಿ, ಲಲಿತ ಟಿಫನ್ಸ್, ಕಾವೇರಿ ಬೇಕರಿ, ಬಸವರಾಜ, ಶಫಿ, ಅತಾವುಲ್ಲಾ, ವಿಲಿಯಮ್ಸ್, ಸುಬ್ಬಣ್ಣ, ರವೀಂದ್ರ, ಅಕ್ಕಮಹಾದೇವಿ, ಆನಂದರಾಮ್, ಆರೀಫ್, ತುಳಜಾರಾಮ್, ಶಿವಶಂಕರ್, ಪ್ರಭಾಕರ್ ಇವರುಗಳಿಂದ ಏಕಬಳಕೆ ಪ್ಲಾಸ್ಟಿಕ್ ವಶ ಪಡಿಸಿಕೊಂಡು ಒಟ್ಟು ರೂ. 16,300/- ಗಳ ದಂಡವನ್ನು ವಸೂಲಿ ಮಾಡಲಾಗಿದೆ.

ಪಾಲಿಕೆ ಆರೋಗ್ಯ ವಿಭಾಗದ ಆರೋಗ್ಯ ನಿರೀಕ್ಷಕರಾದ ಕೆ.ಎನ್. ಹರೀಶ್, ಜೆ.ಹೆಚ್. ನಿಖಿಲ್, ಶ್ರೀಮತಿ ಮಲ್ಲಿಕಾ ಗುಡೆಕೋಟೆ ಮತ್ತು ಶ್ರೀಮತಿ ಉಷಾ ದಾಳಿ ನಡೆಸಿದ ತಂಡದಲ್ಲಿದರು.

# ಉಷಾರಾಣಿ ಕುಂಚದಲ್ಲಿ ಸಿಎಂ ಬೊಮ್ಮಾಯಿ



ದಾವಣಗೆರೆ, ಮೇ 12- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಭಾವಚಿತ್ರವನ್ನು ರಚಿಸಿರುವ ನಗರದ ಹಿರಿಯ ಚಿತ್ರಕಲಾವಿದರಾದ ಉಷಾರಾಣಿ ಅವರು, ಹರಿಹರಕ್ಕೆ ಈಚೆಗೆ ಆಗಮಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಮರ್ಪಿಸಿದರು. ಭಾವಚಿತ್ರವನ್ನು ಸ್ವೀಕರಿಸಿದ ಮುಖ್ಯಮಂತ್ರಿಗಳು ಉಷಾರಾಣಿ ಅವರ ಕಲೆಯನ್ನು ಪ್ರಶಂಸಿಸಿದರು. ಹರಿಹರದ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಮುಂತಾದ ಗಣ್ಯರು ಉಪಸ್ಥಿತರಿದ್ದರು.





www.sparshhospital.com
SPARSH HOSPITAL THE TOUCH OF LIFE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಕ್ಯಾನ್ಸರ್ ತಜ್ಞರು ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಕ್ಯಾನ್ಸರ್ ಚಿಕಿತ್ಸೆ



ಡಾ. ದಿನೇಶ್ ಎಂ ಜಿ
MBBS, MS, Mch ( Surgical Oncology )
ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು

ಸ್ತನ ಕ್ಯಾನ್ಸರ್, ಗರ್ಭ ಕೋಶದ ಕ್ಯಾನ್ಸರ್, ಬಾಯಿ ಮತ್ತು ಗಂಟಲು ಕ್ಯಾನ್ಸರ್, ಹೊಟ್ಟೆ ಮತ್ತು ಕರುಳಿನ ಕ್ಯಾನ್ಸರ್, ಶ್ವಾಸ ಕೋಶದ ಕ್ಯಾನ್ಸರ್, ಕಿಡ್ನಿ ಮತ್ತು ಮೂತ್ರಕೋಶದ ಕ್ಯಾನ್ಸರ್, ದೇಹದ ಯಾವುದೇ ಭಾಗದಲ್ಲಿ ಕ್ಯಾನ್ಸರ್ ಲಕ್ಷಣಗಳು ಕಂಡುಬಂದಲ್ಲಿ ಸಂಪರ್ಕಿಸಿ

ನೋಂದಣಿಗಾಗಿ ಕರೆಮಾಡಿ: 8951991304

ದಿನಾಂಕ: ಶನಿವಾರ, 14 ಮೇ 2022
ಸಮಯ: ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.30ರವರೆಗೆ
ಸ್ಥಳ: ಡಾ. ಮಾಧವಮೂರ್ತಿ ಕ್ಲಿನಿಕ್
ಡಾ. ನಿರ್ಮಲ ಕೇಸರಿ ಕ್ಲಿನಿಕ್ ಎದುರು, ಪಿ ಜೆ ಎಕ್ಸಟೆನ್ಶನ್, 3ನೇ ಮೈನ್, ದಾವಣಗೆರೆ
ವೈದ್ಯರು ಪ್ರತೀ ತಿಂಗಳ ಮೊದಲನೇ ಹಾಗು ಮೂರನೇ ಶನಿವಾರದಂದು ತಪಾಸಣೆಗೆ ಲಭ್ಯರಿರುತ್ತಾರೆ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte